# ಕುವೆಂಪು ವಿಶ್ವವಿದ್ಯಾಲಯ

# ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳು

## ಸಭಾ ದಿನಾಂಕ : 28-10-2022

### ಪ್ರಾಧಿಕಾರಗಳ ವಿಭಾಗ

ಜ್ಞಾನಸಹ್ಯಾದ್ರಿ, ಶಂಕರಘಟ್ಟ – 577 451

ಶಿವಮೊಗ್ಗ ಜಿಲ್ಲೆ.

ಫ್ಯಾಕ್ಸ್: 08282-256262
ಇ-ಮೇಲ್:drsyndicateku@gmail.com
☎ 08282-256148 (ಪ್ರಾಧಿಕಾರಗಳ ವಿಭಾಗ)
ವೆಬ್‌ಸೈಟ್:www.kuvempu.ac.in

# ಕುವೆಂಪು ವಿಶ್ವವಿದ್ಯಾಲಯ

ವಿಶ್ವವಿದ್ಯಾಲಯ ಕಾರ್ಯಾಲಯ, ಜ್ಞಾನ ಸಹ್ಯಾದ್ರಿ- 577 451

ಸಂಖ್ಯೆ: ಕುವಿ:ಯುಎಟಿ-1-ಸಿಂ-08: 382 :2022-23 ದಿನಾಂಕ:08-12-2022

ಮಾನ್ಯರೆ,

ವಿಷಯ: ದಿನಾಂಕ:28-10-2022ರಂದು ನಡೆದ ಸಿಂಡಿಕೇಟ್‌ನ ಸಾಮಾನ್ಯ ಸಭೆಯ ನಡಾವಳಿಯನ್ನು ಕಳುಹಿಸುವ ಬಗ್ಗೆ.

* * *

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ – 2000ರ ಪ್ರಕರಣ – 29(w)ರ ಪ್ರಕಾರ ರಚಿಸಲಾಗಿರುವ/ ಅನುಸರಿಸಲಾಗುತ್ತಿರುವ ವಿಶ್ವವಿದ್ಯಾಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು- ಅಧ್ಯಾಯ- III ರ ಪ್ರಕರಣ- 16 ರನ್ವಯ ದಿನಾಂಕ:28-10-2022 ರಂದು ವಿಶ್ವವಿದ್ಯಾಲಯದ ಆಡಳಿತ ಭವನದ ಮೂರನೇ ಮಹಡಿಯ ಸಿಂಡಿಕೇಟ್ ಸಭಾ ಭವನದಲ್ಲಿ ನಡೆದ ಸಿಂಡಿಕೇಟ್‌ನ ಸಾಮಾನ್ಯ ಸಭೆಯ ನಡಾವಳಿಯನ್ನು ದಿನಾಂಕ: 10.11.2022ರ ಸಿಂಡಿಕೇಟ್ ಸಭೆಯಲ್ಲಿ ದೃಢೀಕರಿಸಲಾಗಿರುತ್ತದೆ. ಆದ್ದರಿಂದ ಸದರಿ ಸಿಂಡಿಕೇಟ್ ಸಭಾ ನಡಾವಳಿಯನ್ನು ಈ ಮೂಲಕ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

ಕುಲಸಚಿವರು

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ಗೆ,

ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ.

ಪ್ರತಿಗಳು:

1) ಮಾನ್ಯ ರಾಜ್ಯಪಾಲರ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯಪಾಲರ ಸಚಿವಾಲಯ, ರಾಜಭವನ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಕರ್ನಾಟಕ ಸರ್ಕಾರದ ಸಚಿವಾಲಯಗಳು ಬಹುಮಹಡಿಗಳ ಕಟ್ಟಡ, ಡಾ.ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು.
3) ಆಯುಕ್ತರು, ಕಾಲೇಜು ಶಿಕ್ಷಣ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ನೃಪತುಂಗ ರಸ್ತೆ, ಬೆಂಗಳೂರು.
4) ಕುಲಸಚಿವರು(ಪರೀಕ್ಷಾಂಗ) ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
5) ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
6) ನಿಕಾಯಗಳ ಡೀನರುಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
7) ಗ್ರಂಥಪಾಲಕರು, ವಿಶ್ವವಿದ್ಯಾಲಯ ಗ್ರಂಥಾಲಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
8) ನಿರ್ದೇಶಕರು, ಐ.ಕ್ಯೂ.ಎ.ಸಿ./ಪಿ.ಎಂ.ಇ/ ಸಿ.ಡಿ.ಸಿ/ ಶಾರೀರಿಕ ಶಿಕ್ಷಣ/ ವಿದ್ಯಾರ್ಥಿ ಕ್ಷೇಮಪಾಲನ/ ಪ್ರಸಾರಾಂಗ/ ದೂರ ಶಿಕ್ಷಣ ನಿರ್ದೇಶನಾಲಯ ವಿಭಾಗ, ಮಹಿಳಾ ಅಧ್ಯಯನ ಕೇಂದ್ರ, ಯು.ಸಿ.ಸಿ.ಎಫ್, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
9) ನಿರ್ದೇಶಕರು / ಜ್ಯೂನಿಯರ್ ಕಂಪ್ಯೂಟರ್ ಪ್ರೊಗ್ರಾಮರ್, ಯು.ಸಿ.ಸಿ.ಎಫ್. ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ – ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಸೇರ್ಪಡಿಸುವುದು.
10) ಎಲ್ಲಾ ಅಧ್ಯಕ್ಷರು, ಸ್ನಾತಕೋತ್ತರ ಅಧ್ಯಯನ ವಿಭಾಗಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ/ಶಿವಮೊಗ್ಗ/ ಕಡೂರು/ ಚಿಕ್ಕಮಗಳೂರು.
11) ಎಲ್ಲಾ ಉಪಕುಲಸಚಿವರು/ಸಹಾಯಕ ಕುಲಸಚಿವರುಗಳು/ ಶಾಖಾಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ/ಶಿವಮೊಗ್ಗ/ಕಡೂರು.
12) ಪ್ರಾಂಶುಪಾಲರು, ಸಹ್ಯಾದ್ರಿ ಕಲಾ ಕಾಲೇಜು / ಸಹ್ಯಾದ್ರಿ ವಿಜ್ಞಾನ ಕಾಲೇಜು/ ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣೆ ಕಾಲೇಜು, ಶಿವಮೊಗ್ಗ.
13) ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ, ಕುವೆಂಪು ವಿಶ್ವವಿದ್ಯಾಲಯ, ಬಿ.ಹೆಚ್ ರಸ್ತೆ ಕಡೂರು.
14) ಸಂಯೋಜನಾಧಿಕಾರಿಗಳು, ಸ್ನಾತಕೋತ್ತರ ಕೇಂದ್ರ, ಐ.ಡಿ.ಎಸ್.ಜಿ ಕಾಲೇಜು ಕಟ್ಟಡ, ಕುವೆಂಪು ವಿಶ್ವವಿದ್ಯಾಲಯ, ಚಿಕ್ಕಮಗಳೂರು.
15) ಸಂಚಾಲಕರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಘಟಕ/ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ಘಟಕ, ವಿದ್ಯಾರ್ಥಿಗಳ ಉತ್ತೇಜನ ಸೇವಾ ಕೇಂದ್ರ, ವಿದ್ಯಾರ್ಥಿಗಳ ಸೌಲಭ್ಯ ಸಮುಚ್ಛಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
16) ಕಾರ್ಯಪಾಲಕ ಅಭಿಯಂತರರು, ಇಂಜಿನಿಯರಿಂಗ್ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
17) ಸಾರ್ವಜನಿಕ ಸಂಪರ್ಕಾಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
18) ಆಪ್ತಕಾರ್ಯಾಲಯ ಕುಲಪತಿಗಳು: ಕುಲಸಚಿವರು: ಕುಲಸಚಿವರು(ಮೌಲ್ಯಮಾಪನ):ಹಣಕಾಸು ಅಧಿಕಾರಿಗಳು. ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
19) ಕಛೇರಿ ಪ್ರತಿ / ರಕ್ಷಣಾ ಕಡತ.

# ಕುವೆಂಪು ವಿಶ್ವವಿದ್ಯಾಲಯ

ದಿನಾಂಕ:28-10-2022 ರಂದು ಶುಕ್ರವಾರ ಅಪರಾಹ್ನ :12.00 ಗಂಟೆಗೆ "ಶತಮಾನೋತ್ಸವ ಭವನದ ಮೂರನೇ ಮಹಡಿಯ ಸಿಂಡಿಕೇಟ್ ಸಭಾಂಗಣ" ಇಲ್ಲಿ ನಡೆದ "ಸಿಂಡಿಕೇಟ್ ಸಾಮಾನ್ಯ ಸಭೆ"ಯ ನಡಾವಳಿಗಳು.

ಹಾಜರಾದ ಸದಸ್ಯರು:

| | | |
|---|---|---|
| 1. | ಪ್ರೊ. ಬಿ.ಪಿ. ವೀರಭದ್ರಪ್ಪ, ಕುಲಪತಿಗಳು | ಅಧ್ಯಕ್ಷರು |
| 2. | ಶ್ರೀಮತಿ ಅನುರಾಧ ಜಿ. ಕೆ.ಎ.ಎಸ್.(ಸೂಪರ್ ಟೈಮ್ ಸ್ಕೇಲ್) ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |
| 3. | ಪ್ರೊ. ನವೀನ್‌ಕುಮಾರ್ ಎಸ್.ಕೆ., ಕುಲಸಚಿವರು(ಮೌಲ್ಯಮಾಪನ) | ಸದಸ್ಯರು |
| 4. | ಶ್ರೀ ರಾಜಶೇಖರ್ ಹೆಬ್ಬಾರ್, ಸಿ., ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರ ಪ್ರತಿನಿಧಿ | ಸದಸ್ಯರು |
| 5. | ಶ್ರೀ ಬಿ. ನಿರಂಜನ ಮೂರ್ತಿ | ಸದಸ್ಯರು |
| 6. | ಶ್ರೀ ಎನ್. ಆರ್. ಮಂಜುನಾಥ | ಸದಸ್ಯರು |
| 7. | ಶ್ರೀ ಹೆಚ್. ಬಿ. ರಮೇಶಬಾಬು | ಸದಸ್ಯರು |
| 8. | ಶ್ರೀ ಬಳ್ಳೇಕೆರೆ ಸಂತೋಷ್ | ಸದಸ್ಯರು |
| 9. | ಶ್ರೀಮತಿ ಕಿರಣ್ ರವೀಂದ್ರ ದೇಸಾಯಿ | ಸದಸ್ಯರು |
| 10. | ಶ್ರೀ ಧರ್ಮಪ್ರಸಾದ್ ಜಿ. | ಸದಸ್ಯರು |
| 11. | ಶ್ರೀ ರಾಮಲಿಂಗಪ್ಪ ಹೆಚ್. | ಸದಸ್ಯರು |
| 12. | ಶ್ರೀ ಎಸ್. ಆರ್. ನಾಗರಾಜ್ | ಸದಸ್ಯರು |
| 13. | ಶ್ರೀ. ಬಿ.ಸಿ. ಬಸವರಾಜಪ್ಪ., ಪ್ರಾಂಶುಪಾಲರು. | ಸದಸ್ಯರು |
| 14. | ಶ್ರೀಮತಿ ಭಾರತಿ, ಪ್ರಾಂಶುಪಾಲರು | ಸದಸ್ಯರು |
| 15. | ಶ್ರೀ ನಟೇಶ್ ಎಸ್. ಎಂ., ಪ್ರಾಂಶುಪಾಲರು | ಸದಸ್ಯರು |
| 16. | ಡಾ. ಧನಂಜಯ ಬಿ.ಜಿ., ಪ್ರಾಂಶುಪಾಲರು | ಸದಸ್ಯರು |

ಗೈರುಹಾಜರಾದ ಸದಸ್ಯರು:

| | | |
|---|---|---|
| 1. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 2. | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 3. | ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 4. | ಆಯುಕ್ತರು, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು. | ಸದಸ್ಯರು |
| 5. | ಪ್ರೊ. ರಿಯಾಜ್ ಮಹಮೂದ್, ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ | ಸದಸ್ಯರು |

ಪೂರ್ವಾನುಮತಿಯೊಂದಿಗೆ ಗೈರು ಹಾಜರಾದ ಸದಸ್ಯರು:

ಪ್ರಸ್ತಾವನೆ: ಪ್ರಾರಂಭದಲ್ಲಿ ಕುಲಸಚಿವರು ಎಲ್ಲಾ ಸದಸ್ಯರಿಗೂ ಹೃತ್ಪೂರ್ವಕವಾಗಿ ಸ್ವಾಗತ ಕೋರಿದರು.

ಸದಸ್ಯರಾದ ಶ್ರೀ ಬಳ್ಳೇಕೆರೆ ಸಂತೋಷ್‌ರವರು ಮಾತನಾಡಿ ಇದ್ದಕ್ಕಿದ್ದಂತೆ ದಿನಾಂಕ:28-10-2022ರಂದು ನಡೆಯಬೇಕಿದ್ದ ಸಭೆ ಮೂಂದೂಡಲು ನಿರ್ಣಯ ಕೈಗೊಂಡಿರುವುದಾಗಿ ತಿಳಿದು ಬಂದಿತ್ತು, ಕಳೆದ ಸಭೆಗಳಲ್ಲಿ ತೆಗೆದುಕೊಂಡ ಯಾವ ನಿರ್ಣಯಗಳೂ ಜಾರಿಗೆ ಬಂದಿರುವುದಿಲ್ಲ ಇದಕ್ಕೆಲ್ಲಾ ಕಾರಣವೇನು ಎಂದು ಕೇಳಿದರು. ಸದಸ್ಯರಾದ ಶ್ರೀ ಹೆಚ್.ಬಿ. ರಮೇಶ್ ಬಾಬುರವರು ಮಾತನಾಡಿ ಸಿಂಡಿಕೇಟ್ ಸಭೆ ಮುಂದೂಡಲು ಕಡತ ಮಂಡಿಸಿ ಅನುಮೋದನೆ ಪಡೆದಿರುವುದಿಲ್ಲ ಆದರೆ ಮತ್ತೆ ನಿಗದಿಯಂತೆ ಸಭೆ ನಡೆಸಲು ಕಡತದಲ್ಲಿ ಮಂಡಿಸಿ ಅನುಮೋದನೆ ಪಡೆಯಬೇಕು ಎಂದು ಸಿಬ್ಬಂದಿ ಹೇಳುತ್ತಾರೆ ಇದು ಯಾವ ನ್ಯಾಯ ಎಂದರು. ಅಲ್ಲದೇ ಸಭೆಯು ತೆಗೆದುಕೊಳ್ಳುವ ಯಾವ ನಿರ್ಣಯಗಳೂ ಜಾರಿಗೆ ಬಂದಿರುವುದಿಲ್ಲ ಎಂದು ಹೇಳಿದರು.

ಸದಸ್ಯರಾದ ಶ್ರೀ ಹೆಚ್. ರಾಮಲಿಂಗಪ್ಪರವರು ಮಾತನಾಡಿ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ವಿಳಂಬವಾಗಿ ನೀಡುತ್ತಿರುವುದಕ್ಕೆ ಕಾರಣವೇನು ಎಂದು ಕೇಳಿದರು.

ಸದಸ್ಯರಾದ ಶ್ರೀ ಹೆಚ್.ಬಿ. ರಮೇಶ್ ಬಾಬುರವರು ಮಾತನಾಡಿ ನಾನು ಅಕ್ಟೋಬರ್ 11ನೇ ತಾರೀಖಿನಿಂದ 15ನೇ ತಾರೀಖಿನವರೆಗೆ ಒಟ್ಟು 7 ಪತ್ರಗಳನ್ನು ಬರೆದಿರುತ್ತೇನೆ ಒಂದು ಪತ್ರಕ್ಕೂ ಉತ್ತರ ಬಂದಿಲ್ಲ ಎಂದರು. ಇದಕ್ಕೆ ಪ್ರತಿಕಿಯಿಸಿದ ಕುಲಸಚಿವರು ಸಾಲು ಸಾಲಾಗಿ ರಜಾ ದಿನಗಳು ಬಂದಿದ್ದರಿಂದ ಪತ್ರ ತಲುಪಲು ವಿಳಂಭವಾಗಿರುತ್ತದೆ ಎಂದು ತಿಳಿಸಿದರು.

ಸದಸ್ಯರಾದ ಶ್ರೀ ಬಿ. ನಿರಂಜನ ಮೂರ್ತಿಯವರು ಮಾತನಾಡಿ ವರ್ಷದಲ್ಲಿ ಎಷ್ಟು ಸಿಂಡಿಕೇಟ್ ಸಭೆ ಮಾಡಬೇಕು ಆದರೆ ಎಷ್ಟು ಸಭೆ ಮಾಡಿದ್ದೀರಾ ತಿಳಿಸಿ ಎಂದು ಕೇಳಿದರು.

ಸದಸ್ಯರಾದ ಶ್ರೀ ಬಳ್ಳೇಕೆರೆ ಸಂತೋಷ್ ರವರು ಮಾತನಾಡಿ ಕಳೆದ ಸಿಂಡಿಕೇಟ್ ಸಭೆಯ ನಿರ್ಣಯಗಳು ಜಾರಿ ಆಗೋ ತನಕ ನಾನು ಮುಂದಿನ ಅಜೆಂಡಾ ತೆಗೆದುಕೊಳ್ಳಲು ಒಪ್ಪುವುದಿಲ್ಲ ಎಂದು ಹೇಳಿದರು. ಮುಂದುವರೆದು ಮಾತನಾಡಿ ದೂರಶಿಕ್ಷಣದ ಅನ್ನಪೂರ್ಣೇಶ್ವರಿ ಅಧ್ಯಯನ ಕೇಂದ್ರ, ಎಸ್.ಎಸ್.ಕರಸ್ಪಾಂಡೆನ್ಸ್ ಕಾಲೇಜ್ ಹಾಗೂ ಸುಜಲಾ ಅಧ್ಯಯನ ಕೇಂದ್ರಗಳು ವಿದ್ಯಾರ್ಥಿಗಳಿಂದ ಪಡೆದ ರೂ.30,00000-00ಕ್ಕೂ ಅಧಿಕ ಶುಲ್ಕವನ್ನು ವಿಶ್ವವಿದ್ಯಾಲಯಕ್ಕೆ ಕಟ್ಟಬೇಕಾಗಿದ್ದರೂ ಸಹ ಅಧ್ಯಯನ ಕೇಂದ್ರಗಳಿಗೆ ತಕ್ಷಣ ಶುಲ್ಕ ಪಾವತಿಸದಿರಲು ವಿನಾಯಿತಿ ನೀಡಿ ವಿದ್ಯಾರ್ಥಿಗಳು ಪರೀಕ್ಷೆ ತೆಗೆದುಕೊಳ್ಳಲು ಅವಕಾಶ ನೀಡಿ ಮಾನ್ಯ ಕುಲಪತಿಗಳು ಪತ್ರದ ಮೇಲೆ ಲಿಖಿತವಾಗಿ ನಮೂದಿಸಿದ್ದಾರೆ. ಇದರ ಮೂಲಕ ವಿಶ್ವವಿದ್ಯಾಲಯದ ಬದಲಿಗೆ ಅಧ್ಯಯನ ಕೇಂದ್ರಗಳಿಗೆ ಅನುಕೂಲ ಮಾಡಿಕೊಟ್ಟು ಶುಲ್ಕ ಬಾಕಿಯಾಗಲು ಕಾರಣರಾಗಿರುತ್ತಾರೆ ಎಂದು ಮಾನ್ಯ ಕುಲಪತಿಗಳ ಮೇಲೆ ಆರೋಪ ಮಾಡಿದರು.

ಸದಸ್ಯರಾದ ಶ್ರೀ ಹೆಚ್.ಬಿ. ರಮೇಶ್ ಬಾಬುರವರು ಮಾತನಾಡಿ 2022ರ ಮೇ ತಿಂಗಳಿನಲ್ಲಿ ಈ ಎಲ್ಲಾ ಅಧ್ಯಯನ ಕೇಂದ್ರಗಳಿಗೆ ಭೇಟಿ ನೀಡಿ ವರದಿ ನೀಡಲಾಗಿದೆ ಆದರೆ ಈ ವರದಿಯ ಮೇಲೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ ಎಂದು ಹೇಳಿದರು.

ಸದಸ್ಯರಾದ ಶ್ರೀ ಜಿ. ಧರ್ಮಪ್ರಸಾದ ರವರು ಮಾತನಾಡಿ ವಿಶ್ವವಿದ್ಯಾಲಯಕ್ಕೆ ಅಧ್ಯಯನ ಕೇಂದ್ರದವರು ಕಟ್ಟಬೇಕಾದ ಶುಲ್ಕವನ್ನು ಪಾವತಿಸಲು ಸಮಯಾವಕಾಶ ನೀಡಲು ಕಾರಣವೇನು? ಮೂರು ಅಧ್ಯಯನ ಕೇಂದ್ರದವರಿಗೂ ವಿನಾಯಿತಿ ನೀಡಿದ್ದು ತಪ್ಪು ಎಂದು ಹೇಳಿದರು. ಈ ವಿಷಯಗಳು ಯಾವೂ ಸಣ್ಣ ವಿಷಯ ಅಲ್ಲ ಇವೆಲ್ಲಾ ಭ್ರಷ್ಟಾಚಾರದ ವ್ಯಾಪ್ತಿಗೆ ಬರುತ್ತವೆ ಎಂದು ಹೇಳಿದರು.

ಸದಸ್ಯರಾದ ಶ್ರೀ ಬಳ್ಳೇಕೆರೆ ಸಂತೋಷ್‌ರವರು ಮಾತನಾಡಿ ವಿದ್ಯಾರ್ಥಿಗಳು ಅಧ್ಯಯನ ಕೇಂದ್ರಗಳಿಗೆ ಪಾವತಿಸಿರುವ ಶುಲ್ಕವನ್ನು ಅಧ್ಯಯನ ಕೇಂದ್ರದವರು ಬಳಸಿಕೊಂಡು ವಿಶ್ವವಿದ್ಯಾಲಯಕ್ಕೆ ಕಟ್ಟದೇ ಇರುವುದು ಅಪರಾಧ ಎಂದರು.

ಸದಸ್ಯರಾದ ಶ್ರೀ ಎನ್. ಆರ್. ಮಂಜುನಾಥ್ ರವರು ಮಾತನಾಡಿ ಶುಲ್ಕ ಪಾವತಿಸದಿರಲು ವಿನಾಯಿತಿ ನೀಡಿ ಪರೀಕ್ಷೆ ತೆಗೆದುಕೊಳ್ಳಲು ಅವಕಾಶ ನೀಡಲು ಅವಕಾಶವಿಲ್ಲ ಇದು ಸ್ವಂತ ವಿಷಯವಲ್ಲ ವಿದ್ಯಾರ್ಥಿಗಳು ಪಾವತಿಸಿರುವ ಶುಲ್ಕವನ್ನು ವಿಶ್ವವಿದ್ಯಾಲಯಕ್ಕೆ ಕಟ್ಟಲೇಬೇಕು ಎಂದು ಹೇಳಿದರು.

ಸದಸ್ಯರಾದ ಶ್ರೀ ಬಿ. ನಿರಂಜನ ಮೂರ್ತಿಯವರು ಮಾತನಾಡಿ ರೆಗ್ಯುಲರ್ ವಿದ್ಯಾರ್ಥಿಗಳ ಪ್ರವೇಶ ಶುಲ್ಕ ಹಾಗೂ ಪರೀಕ್ಷಾ ಶುಲ್ಕ ವಿಶ್ವವಿದ್ಯಾಲಯಕ್ಕೆ ಪಾವತಿಯಾಗದಿದ್ದಲ್ಲಿ ಅಂತಹ ವಿದ್ಯಾರ್ಥಿಗಳಿಗೆ ಪರೀಕ್ಷೆ ತೆಗೆದುಕೊಳ್ಳಲು ಅವಕಾಶ ನೀಡಲಾಗುವುದಿಲ್ಲ ಆದರೆ ದೂರ ಶಿಕ್ಷಣದಲ್ಲಿ ಮಾತ್ರ ಏಕೆ ಹೀಗೆ ಎಂದು ಕೇಳಿದರು.

ಸದಸ್ಯರಾದ ಶ್ರೀ ನಟೇಶ್‌ರವರು ಮಾತನಾಡಿ ಮುಂದಿನವಾರ ನಡೆಯಲಿರುವ ರೆಗ್ಯುಲರ್ ಪರೀಕ್ಷೆಗಳಿಗೆ ವಿದ್ಯಾರ್ಥಿಗಳ ಶುಲ್ಕ ವಿಶ್ವವಿದ್ಯಾಲಯಕ್ಕೆ ಪಾವತಿಸಿಲ್ಲ ಎಂದರೆ ಪ್ರವೇಶಾನುಮೋದನೆ ಮಾಡಿ ಕೊಡ್ತೀರಾ ಎಂದು ಕೇಳಿದರು.

ಸದಸ್ಯರಾದ ಶ್ರೀ ಬಿ. ನಿರಂಜನ ಮೂರ್ತಿಯವರು ಮಾತನಾಡಿ ಶುಲ್ಕ ವಿಶ್ವವಿದ್ಯಾಲಯಕ್ಕೆ ಪಾವತಿಯಾಗಿಲ್ಲ ಎಂದರೆ ಯಾವ ವಿದ್ಯಾರ್ಥಿಗಳ ಪ್ರವೇಶಾನುಮೋದನೆಯೂ ಆಗುವುದಿಲ್ಲ, ಆದರೆ ತಾವು ಹೇಗೆ ಪ್ರವೇಶಾನುಮೋದನೆ ಮಾಡಿದಿರಿ, ಅಧ್ಯಯನ ಸಾಮಗ್ರಿಗ್ಳನ್ನು ನೀಡುತ್ತೀರಿ. ಆಂತರಿಕ ಅಂಕಗಳು ಹಾಗೂ ಪರೀಕ್ಷೆಗಳಿಗೆ ಹೇಗೆ ಅವಕಾಶ ನೀಡುತ್ತೀರಿ ಎಂಬ ಬಗ್ಗೆ ವಿವರ ಕೊಡಿ ಎಂದು ಹೇಳಿದರು.

ಸದಸ್ಯರಾದ ಶ್ರೀ ಧರ್ಮಪ್ರಸಾದ್‌ರವರು ಮಾತನಾಡಿ ಅಧ್ಯಯನ ಕೇಂದ್ರಗಳ ಮೇಲ್ಕಂಡ ವಿವರವನ್ನು ಪರಿಶೀಲಿಸಲು ಸಮಿತಿ ರಚನೆಯಾಗಿದ್ದು ಪರಿಶೀಲನೆಗೆ ಕೆಲವು ಮಾಹಿತಿಗಳು ಬೇಕಾಗಿದ್ದು ಸಮಿತಿಯ ಅಧ್ಯಕ್ಷರಾದ ಪ್ರೊ, ರಿಯಾಜ್ ಮಹಮೂದ್‌ರವರು ಲಿಖಿತವಾಗಿ ದೂರಶಿಕ್ಷಣ ವಿಭಾಗದ ಕಛೇರಿ ಹಾಗೂ ಪರೀಕ್ಷಾ ವಿಭಾಗದಿಂದ ಮಾಹಿತಿ ಕೇಳಿದರೂ ಯಾರಿಂದಲೂ ಮಾಹಿತಿ ಸ್ವೀಕೃತವಾಗಿಲ್ಲ ಎಂದು ಹೇಳಿದರು.

ಸದಸ್ಯರಾದ ಶ್ರೀ ಬಿ. ನಿರಂಜನ ಮೂರ್ತಿಯವರು ಮಾತನಾಡಿ ಶುಲ್ಕ ಪಾವತಿಯಾಗಿರುವುದರ ಕುರಿತು ಮಾಹಿತಿ ಪಡೆದು ಮುಂದಿನ ಕ್ರಮಕೈಗೊಳ್ಳಬೇಕು ಆದರೆ ಇದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗಬಾರದು.ಇದಕ್ಕೆ ಕಾರಣರಾದವರ ಮೇಲೆ ಹಾಗೂ ಸ್ಟಡೀ ಸೆಂಟರ್‌ಗಳ ಮೇಲೆ ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು.

ಮಾನ್ಯ ಕುಲಪತಿಗಳು ತಮ್ಮ ಮೇಲೆ ಆಪಾದನೆ ಮಾಡುತ್ತಿರುವ ಕುರಿತು ಆಕ್ಷೇಪ ವ್ಯಕ್ತಪಡಿಸಿದರು.

ಸದಸ್ಯರಾದ ಶ್ರೀ ಧರ್ಮಪ್ರಸಾದ್‌ರವರು ಮಾತನಾಡಿ ಅಧ್ಯಯನ ಕೇಂದ್ರದವರು ಚೆಕ್ ಕೊಟ್ಟ ತಕ್ಷಣ ಡಿ.ಡಿ. ಕೊಟ್ಟ ತಕ್ಷಣ ವಿಶ್ವವಿದ್ಯಾಲಯಕ್ಕೆ ಶುಲ್ಕ ಸಂದಾಯವಾಗುವುದಿಲ್ಲ. ಅದು ಬ್ಯಾಂಕಿಗೆ ಹೋಗಿ ಜಮಾ ಆಗಬೇಕು ಆಗ ಮಾತ್ರ ವಿಶ್ವವಿದ್ಯಾಲಯಕ್ಕೆ ಹಣ ಬರುತ್ತದೆ ಎಂದು ಹೇಳಿದರು. ಮುಂದುವರೆದು 2019–20ನೇ ಸಾಲಿನಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳ ವಿವರ ಇವರ ಶುಲ್ಕ ಪಾವತಿ ವಿವರ ಯುಜಿಸಿ ಪೋರ್ಟಲ್‌ನಲ್ಲಿ ಅಪ್–ಲೋಡ್ ಆಗಿರುವ ವಿದ್ಯಾರ್ಥಿಗಳ ವಿವರ ಇತ್ಯಾಧಿಗಳ ಮಾಹಿತಿ ನೀಡುವಂತೆ ಕೇಳಿದ್ದೇವೆ ಎಂದು ಹೇಳಿದರು.

ಸದಸ್ಯರಾದ ಶ್ರೀ ಎಸ್. ಆರ್. ಮಂಜುನಾಥ್‌ರವರು ಯಾಕೆ ಮಾಹಿತಿಯನ್ನು ಬೇಗ ತರಿಸಿಲ್ಲ ಎಂದು ಕುಲಸಚಿವರನ್ನು ಪ್ರಶ್ನಿಸಿದರು. ಕುಲಸಚಿವರು ಬೇಗ ಮಾಹಿತಿಯನ್ನು ನೀಡುವಂತೆ ದೂರ ಶಿಕ್ಷಣ ನಿರ್ದೇಶಕರ ಪ್ರಭಾರದಲ್ಲಿರುವ ಕುಲಸಚಿವ (ಪರೀಕ್ಷಾಂಗ)ರವರಿಗೆ ತಿಳಿಸಿದ್ದೇನೆ ಎಂದು ಹೇಳಿದರು. ಮುಂದುವರೆದು ಪ್ರೊ, ರಿಯಾಜ್ ಮಹಮೂದ್‌ರವರ ಅಧ್ಯಕ್ಷತೆಯಲ್ಲಿ ವಿಶ್ವವಿದ್ಯಾಲಯಕ್ಕೆ ಅಧ್ಯಯನ ಕೇಂದ್ರಗಳಿಂದ ಆಂತರಿಕ ಅಂಕಗಳು ಸಲ್ಲಿಕೆಯಾಗಿರುವ ಕುರಿತು ಪರಿಶೀಲಿಸಲು ರಚಿಸಲಾದ ಸಮಿತಿಯು ನೀಡಿರುವ ವರದಿಯನ್ನು ಸಭೆಗೆ ಮಂಡಿಸಿದರು.

ಸದಸ್ಯರಾದ ಶ್ರೀ ನಿರಂಜನಮೂರ್ತಿಯವರು ಮಾತನಾಡಿ ವಿದ್ಯಾರ್ಥಿಗಳು ಪ್ರವೇಶ ಪಡೆದ ವಿವರ ಮತ್ತು ಶುಲ್ಕ ಪಾವತಿಸಿರುವ ಕುರಿತು ಮಾಹಿತಿ ನೀಡದಿರುವ ಅಧ್ಯಯನ ಕೇಂದ್ರಗಳಲ್ಲಿ ಪರೀಕ್ಷೆ ಹೇಗೆ ನಡೆಸಬೇಕು, ಫಲಿತಾಂಶ ಹೇಗೆ ಪ್ರಕಟಿಸಲಾಗುತ್ತದೆ ಎಂದು ಕೇಳಿದರು.

ಕುಲಸಚಿವರು ಮಾತನಾಡಿ ಸಮಿತಿಗಳು ಸಲ್ಲಿಸಲಾದ ವರದಿಗಳ ಪ್ರಕಾರ ಅಧ್ಯಯನ ಕೇಂದ್ರದವರು ನೀಡದೇ ಇದ್ದ ಮಾಹಿತಿಗಳನ್ನು ಮತ್ತು ಕಂಡು ಬಂದ ನ್ಯೂನತೆಗಳ ಕುರಿತು ವಿವರಣೆಗಳನ್ನು ನೀಡಬೇಕೆಂದು ದಿನಾಂಕ:01–06–2022ರಂದು ಮಾಹಿತಿ ಸಲ್ಲಿಸದೇ ಇರುವ ಎಲ್ಲಾ ಆರು ಅಧ್ಯಯನ ಕೇಂದ್ರಗಳಿಗೆ

ಸೂಚನಾ ಪತ್ರವನ್ನು ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರಿಗೆ/ ಕೋಆರ್ಡಿನೇಟರ್‌ಗಳಿಗೆ, ಮತ್ತು ಕಾಲೇಜಿನ ಆಡಳಿತ ಮಂಡಳಿ/ ಟ್ರಸ್ಟ್‌ನ ಅಧ್ಯಕ್ಷರು/ ಕಾರ್ಯದರ್ಶಿಗಳಿಗೆ ಕಳುಹಿಸಲಾಗಿದೆ. ಆರು ಅಧ್ಯಯನ ಕೇಂದ್ರಗಳ ಪೈಕಿ ಒಂದು ಅಧ್ಯಯನ ಕೇಂದ್ರದವರು ಮಾತ್ರ ದಾಖಲೆಗಳನ್ನು ಸಲ್ಲಿಸಿರುತ್ತಾರೆ. ಉಳಿದ ಅಧ್ಯಯನ ಕೇಂದ್ರಗಳವರು ಈ ದಿನಾಂಕದವರೆಗೆ ಯಾವುದೇ ದಾಖಲೆ / ವಿವರಗಳನ್ನು ಸಲ್ಲಿಸಿರುವುದಿಲ್ಲ. ಮಾಹಿತಿ / ವಿವರ ನೀಡಿ ಸಹಕರಸದಿದ್ದಲ್ಲಿ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದ್ದರೂ ಸಹ 5 ಕೇಂದ್ರಗಳವರು ಯಾವುದೇ ಪ್ರತಿಕ್ರಿಯೆ ನೀಡಿರುವುದಿಲ್ಲ. ಶ್ರೀ ನಾಗೇಂದ್ರ ಪ್ರಸಾದ್, ಮ್ಯಾನೇಜಿಂಗ್ ಟ್ರಸ್ಟಿ, ಎಸ್.ಎಸ್. ಕರೆಸ್‌ಪಾಂಡೆನ್ಸ್ ಕಾಲೇಜು ಬೆಂಗಳೂರು – ಇವರಿಗೆ ಕಳುಹಿಸಲಾದ ಸೂಚನಾ ಪತ್ರ ಸ್ವೀಕೃತವಾಗದೇ ಹಿಂದಕ್ಕೆ ಬಂದಿರುತ್ತದೆ ಎಂದು ಹೇಳಿದರು. ಪ್ರಸ್ತುತ 2022ರ ಡಿಸೆಂಬರ್ ತಿಂಗಳವರೆಗೂ ಪರೀಕ್ಷೆಗಳು ನಡೆಯತ್ತಿರುವುದರಿಂದ ಯಾವ ರೀತಿ ಕ್ರಮ ಕೈಗೊಳ್ಳಬೇಕೆಂದು ಚರ್ಚಿಸಬೇಕಾಗುತ್ತದೆ ಎಂದು ಹೇಳಿದರು.

ಸದಸ್ಯರಾದ ಶ್ರೀ ನಿರಂಜನಮೂರ್ತಿಯವರು ಮಾತನಾಡಿ ಈ ಕಾಲೇಜುಗಳಲ್ಲಿ ಪರೀಕ್ಷೆಗಳು ನಡೆಯುತ್ತದೆಯಾ ಪರಿಶೀಲಿಸಿ ಎಂದು ಹೇಳಿದರು.ಪರೀಕ್ಷೆ ನಡೆಯಲಿ ಆದರೆ ಫಲಿತಾಂಶ ಮತ್ತು ಅಂಕಪಟ್ಟಿಯನ್ನು ತಡೆ ಹಿಡಿಯಲಾಗುವುದು ಎಂಬ ಎಚ್ಚರಿಕೆ ಸಂದೇಶವನ್ನು ವರದಿ ನೀಡದ ಅಧ್ಯಯನ ಕೇಂದ್ರಗಳಿಗೆ ಈಗಲೇ ತಲುಪಲಿ ಎಂದು ಎಲ್ಲಾ ಸದಸ್ಯರು ಹೇಳಿದರು. ಅದಕ್ಕೆ ಅಧ್ಯಕ್ಷರು ಒಪ್ಪಿಗೆ ಸೂಚಿಸಿದರು.

ನಿರ್ಣಯ: ಚರ್ಚೆಯ ನಂತರ ಎಲ್ಲಾ ಸದಸ್ಯರ ಸರ್ವಾನುಮತದ ಮೇರೆಗೆ ಪರೀಕ್ಷೆ ನಡೆಸಲು ಹಾಗೂ ವರದಿ ನೀಡದ ಅಧ್ಯಯನ ಕೇಂದ್ರಗಳಿಗೆ ಫಲಿತಾಂಶ ಮತ್ತು ಅಂಕಪಟ್ಟಿಯನ್ನು ತಡೆ ಹಿಡಿಯಲಾಗುವುದು ಎಂಬ ಎಚ್ಚರಿಕೆ ಸಂದೇಶವನ್ನು ಕೂಡಲೇ ತಲುಪಿಸಲು ಸಭೆಯು ನಿರ್ಣಯಿಸಿತು.

ಕುಲಸಚಿವ (ಪರೀಕ್ಷಾಂಗ)ರವರು ಮಾತನಾಡಿ ಎಸ್.ಎಸ್. ಕರೆಸ್‌ಪಾಂಡೆನ್ಸ್ ಕಾಲೇಜ್ ಈ ಸೆಂಟರ್‌ನಿಂದ ರೂ.40 ಲಕ್ಷ ಬಾಕಿ ಶುಲ್ಕ ವಿಶ್ವವಿದ್ಯಾಲಯಕ್ಕೆ ಬರಬೇಕಾಗಿದೆ ಆದರೂ ಹಿಂದಿನ ಕುಲಸಚಿವ(ಪರೀಕ್ಷಾಂಗ)ರವರು ಸದರಿ ಕಾಲೇಜಿಗೆ ಅಂಕಪಟ್ಟಿಗಳನ್ನು ಕಳುಹಿಸಿಕೊಟ್ಟಿರುತ್ತಾರೆ ಎಂದು ಹೇಳಿದರು.

ಸದಸ್ಯರಾದ ಶ್ರೀ ಧರ್ಮಪ್ರಸಾದ್‌ರವರು ಮಾತನಾಡಿ ಈ ವಿಷಯಕ್ಕೆ ಸಂಬಂಧಿಸಿದಂತೆ ಮೊದಲನೇಯದಾಗಿ ಅಧ್ಯಯನ ಕೇಂದ್ರಗಳು ವಿದ್ಯಾರ್ಥಿಗಳಿಂದ ಪಡೆದ ಶುಲ್ಕ ವಿಶ್ವವಿದ್ಯಾಲಯಕ್ಕೆ ಪಾವತಿಸಬೇಕು, ಕೋರ್ಟ್ ಆದೇಶದ ಮೇಲೆ ಫಲಿತಾಂಶದ ಅಂಕಪಟ್ಟಿ ನೀಡಬೇಕು, ಅಧ್ಯಯನ ಕೇಂದ್ರಗಳ ಕಾರಣಕ್ಕೆ ವಿದ್ಯಾರ್ಥಿಗಳಿಗೆ ಶಿಕ್ಷೆಯಾಗಬಾರದು ಎಂದು ಹೇಳಿದರು.

ಸದಸ್ಯರಾದ ಶ್ರೀ ಹೆಚ್.ಬಿ. ರಮೇಶ್ ಬಾಬುರವರು ಮಾತನಾಡಿ 2019-20ರಲ್ಲಿ ಈಗಿನ ಕುಲಸಚಿವರು/ ಕುಲಸಚಿವರು(ಪರೀಕ್ಷಾಂಗ)ರವರು ಕರ್ತವ್ಯ ನಿರ್ವಹಿಸುತ್ತಾ ಇರಲಿಲ್ಲ ಹಾಗಾಗಿ ಅಧ್ಯಕ್ಷರೇ ಉತ್ತರಿಸಬೇಕು ಎಂದು ಹೇಳಿದರು.

ಸದಸ್ಯರಾದ ಶ್ರೀ ಜಿ. ಧರ್ಮಪ್ರಸಾದ್‌ರವರು ಮಾತನಾಡಿ ನಿರ್ಣಯಗಳು ವ್ಯತಿರಿಕ್ತವಾಗಿ ಆಗಬಾರದು ಎಂಬ ಕಾರಣಕ್ಕಾಗಿ ಲಿಖಿತವಾಗಿ ಮಾಹಿತಿಯನ್ನು ಸಮಿತಿಯವರು ಕೋರಿದ್ದಾರೆ ಎಂದರು.

ಸದಸ್ಯರಾದ ಶ್ರೀ ಹೆಚ್.ಬಿ. ರಮೇಶ್ ಬಾಬುರವರು ಮಾತನಾಡಿ ನಮ್ಮ ಸಮಿತಿಯು ಸ್ಪಷ್ಟವಾಗಿ ವರದಿ ನೀಡಿದೆ ವರದಿಯ ಆಧಾರದ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂದರು.

ಜಂಟಿ ನಿರ್ದೇಶಕರು ಮಾತನಾಡಿ ಬಾಕಿ ಶುಲ್ಕ ಪಾವತಿಸದ ಅಧ್ಯಯನ ಕೇಂದ್ರಗಳ ಮೇಲೆ ಕೇಸ್ ಹಾಕಿ, ಆಗ ಬಡ್ಡಿ ಸಹಿತ ವಸೂಲಾಗುತ್ತದೆ ಎಂದು ಹೇಳಿದರು.

ಸದಸ್ಯರಾದ ಶ್ರೀ ಎನ್. ಆರ್. ಮಂಜುನಾಥ್‌ರವರು ಮಾತನಾಡಿ ಯಾವ ನಿಯಮ/ಕಾನೂನುಗಳ ಅನ್ವಯ ಅಧ್ಯಯನ ಕೇಂದ್ರದವರು ಪಾವತಿಸಬೇಕಾದ ಶುಲ್ಕಕ್ಕೆ ವಿನಾಯಿತಿ ನೀಡಿದ್ದೀರಿ ಎಂದು ಕೇಳಿದರು. ಇದಕ್ಕೆ ಮಾನ್ಯ ಕುಲಪತಿಗಳು ಆಕ್ಷೇಪಿಸಿದರು. ಆಕ್ಷೇಪಣೆಗೆ ಶ್ರೀ ರಮೇಶ್ ಬಾಬುರವರು ಖಂಡಿಸಿದರು.

ಸದಸ್ಯರಾದ ಶ್ರೀ ಎನ್. ಆರ್. ಮಂಜುನಾಥ್‌ರವರು ಪುನ: ಮಾತನಾಡಿ ವಿದ್ಯಾರ್ಥಿಗಳಿಂದ ಪಡೆದ ಶುಲ್ಕವನ್ನು ವಿಶ್ವವಿದ್ಯಾಲಯಕ್ಕೆ ಪಾವತಿಸಲು ವಿನಾಯಿತಿ ನೀಡಲು ಕುಲಪತಿಗಳಿಗೆ ಅಧಿಕಾರ ಇದೆಯಾ ವಿಶ್ವವಿದ್ಯಾಲಯಕ್ಕೆ ಏಕೆ ನಷ್ಟವುಂಟು ಮಾಡಿದ್ದೀರಿ ಎಂದು ಕೇಳಿದರು.

ಜಂಟಿ ನಿರ್ದೇಶಕರು ಮಾತನಾಡಿ ಈಗಾಗಲೇ ತನಿಖೆ ಆಗಿದೆ ಅಲ್ಲವೇ ಬಾಕಿ ಶುಲ್ಕ ಪಾವತಿಸದ ಅಧ್ಯಯನ ಕೇಂದ್ರಗಳ ಮೇಲೆ ಕೇಸ್ ಹಾಕಿ ಎಂದರು.

ಕುಲಸಚಿವರು ಮಾತನಾಡಿ ಈಗಾಗಲೇ ಕೇಸುಗಳು ನಡೆಯುತ್ತಿವೆ ಎಂದು ಹೇಳಿದರು.

ಸದಸ್ಯರಾದ ಡಾ. ಧನಂಜಯ್ ಬಿ.ಜಿ.ರವರು ಮಾತನಾಡಿ ವಿದ್ಯಾರ್ಥಿಗಳಿಗೆ ತೊಂದರೆ ಮಾಡುವುದು ಬೇಡ ಬೇರೆ ಅಧ್ಯಯನ ಕೇಂದ್ರಗಳಿಗೆ ಟ್ಯಾಗ್ ಮಾಡಿ ಪರೀಕ್ಷೆ ನಡೆಸಬೇಕು. ಹಾಗೂ ಇಷ್ಟೆಲ್ಲಾ ಸಮಸ್ಯೆಗಳಿಗೆ ಕಾರಣರಾದ ಅಧ್ಯಯನ ಕೇಂದ್ರಗಳ ಮೇಲೆ ಕ್ರಮ ತೆಗದುಕೊಳ್ಳಬೇಕು ಹಾಗೂ ವಿಶ್ವವಿದ್ಯಾಲಯದ ಸಿಬ್ಬಂದಿಗಳ ಕಾರ್ಯವೈಖರಿಯ ಕುರಿತು ನಿಗಾ ವಹಿಸಬೇಕು, ಶುಲ್ಕ ಪಾವತಿಸಲು ಅಧ್ಯಯನ ಕೇಂದ್ರಗಳಿಗೆ ವಿನಾಯಿತಿ ನೀಡಲು ಅವಕಾಶ ಇದೆಯಾ ಪರಿಶೀಲಿಸಬೇಕು ಎಂದು ಹೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ ಹಿಂದಿನ ಕುಲಪತಿಗಳು ಅನುಸರಿಸಿದ ಕ್ರಮವನ್ನೇ ನಾನು ಕೂಡ ಮುಂದುವರೆಸಿಕೊಂಡು ಬಂದಿದ್ದೇನೆ ಎಂದು ಹೇಳಿದರು.

ಸದಸ್ಯರಾದ ಶ್ರೀ ಜಿ. ಧರ್ಮಪ್ರಸಾದ್ ರವರು ಮಾತನಾಡಿ ವಿದ್ಯಾರ್ಥಿಗಳು ಪಾವತಿಸಿರುವ ಶುಲ್ಕವನ್ನು ವಿಶ್ವವಿದ್ಯಾಲಯಕ್ಕೆ ಪಾವತಿಸದೇ ತಮ್ಮ ಬಳಿ ಇಟ್ಟುಕೊಳ್ಳಲು ಅನುಮತಿ ನೀಡಲು ಯಾರಿಗೂ ಅಧಿಕಾರ ಇರುವುದಿಲ್ಲ ಸಂಸ್ಥೆಯ ಹಣವನ್ನು ಈ ರೀತಿ ದುರುಪಯೋಗಪಡಿಸಿಕೊಳ್ಳಲು ಯಾರಿಗೂ ಅವಕಾಶವಿಲ್ಲ. ವಿಶ್ವವಿದ್ಯಾಲಯಕ್ಕೆ ಉಂಟಾಗುವ ನಷ್ಟಕ್ಕೆ ಯಾವ ಅಧಿಕಾರಿಗಳು ಕಾರಣರಾಗಿರುತ್ತಾರೋ ಆ ಅಧಿಕಾರಿಗಳಿಂದಲೇ ವಸೂಲು ಮಾಡಬೇಕು ಎಂದು ಹೇಳಿದರು.

ಕುಲಸಚಿವ(ಪರೀಕ್ಷಾಂಗ)ರವರು ಮಾತನಾಡಿ ಅಧ್ಯಯನ ಕೇಂದ್ರಗಳಿಂದ ಒಟ್ಟು ರೂ. ನಾಲ್ಕು ಕೋಟಿ ಶುಲ್ಕ ಬಾಕಿ ಇದ್ದು ಒಂದು ಕೋಟಿ ಬಂದಿದೆ ಈಗ ಪರೀಕ್ಷೆಗಳು ನಡೆಯಲಿದ್ದು ಶುಲ್ಕ ಪಾವತಿಯಾಗದೇ ಇರುವ ಅಧ್ಯಯನ ಕೇಂದ್ರಗಳಿಗೆ ಪರೀಕ್ಷೆಗೆ ಅವಕಾಶ ನೀಡಬೇಕೆ ಅಥವಾ ಬೇಡವೇ ಎಂದು ಕೇಳಿದರು.

ಸದಸ್ಯರಾದ ಶ್ರೀ ಜಿ. ಧರ್ಮಪ್ರಸಾದ್‌ರವರು ಮಾತನಾಡಿ ಈ ಹಿಂದೆ ಉಚ್ಚ ನ್ಯಾಯಾಲಯದ ಆದೇಶದ ಪ್ರಕಾರ ಸುಮಾರು 14100 ಶುಲ್ಕ ಪಾವತಿಸಿರುವ ವಿದ್ಯಾರ್ಥಿಗಳಿದ್ದಾರೆ ಅವರಿಗೆ ಮೊದಲು ಫಲಿತಾಂಶವನ್ನು ನೀಡಬೇಕು. ಕೆಲವರು ಚಲನ್ ಮೂಲಕ ಶುಲ್ಕ ಪಾವತಿಸಿದ್ದಾರೆ ಇನ್ನು ಕೆಲವರು ಅಧ್ಯಯನ ಕೇಂದ್ರಗಳಿಗೆ ಕೊಟ್ಟಿದ್ದಾರೆ. ಹಿಂದಿನ ದಿನಾಂಕಗಳಲ್ಲಿ ಪಾವತಿಸಿದ ಚಲನ್ ಅಥವಾ ರಶೀದಿ ಇದ್ದಲ್ಲಿ ಪರಿಶೀಲಿಸಿ ಪರೀಕ್ಷೆಗೆ ಅವಕಾಶ ನೀಡಬಹುದು ಹಾಗೂ ಫಲಿತಾಂಶ ಪ್ರಕಟಿಸಬಹುದು ಇಲ್ಲದಿದ್ದಲ್ಲಿ ಗೊಂದಲ ಉಂಟಾಗಬಹುದು. ಎಂದು ಹೇಳಿದರು. ಶುಲ್ಕ ಬಾಕಿ ಇರುವ ಅಧ್ಯಯನ ಕೇಂದ್ರಗಳ ಪರೀಕ್ಷೆಯ ಫಲಿತಾಂಶ ಮತ್ತು ಅಂಕಪಟ್ಟಿಯನ್ನು ತಡೆಹಿಡಿಯಲಾಗುವುದು ಎಂದು ಸುದ್ದಿ ಮಾಧ್ಯಮಗಳಲ್ಲಿ ಸಾರ್ವಜನಿಕ ಪ್ರಕಟಣೆ (Public Notice)ಯನ್ನು ನೀಡಬಹುದು, ಉತ್ತೀರ್ಣರಾಗಲಿ ಅಥವಾ ಅನುತ್ತೀರ್ಣರಾಗಲಿ ಮುಂದಿನ ತರಗತಿಗೆ ಹೋಗುವಂತಿಲ್ಲ. ದಯ ಮಾಡಿ ನವಂಬರ್ 27ರಿಂದ ಪ್ರಾರಂಭವಾಗಬೇಕಾಗಿರುವ ಪರೀಕ್ಷೆಗಳನ್ನು ಈ ಹಂತದಲ್ಲಿ ಮುಂದೂಡಬೇಡಿ ಎಂದು ಹೇಳಿದರು. ಈ ಮಧ್ಯೆ ಪರೀಕ್ಷೆ ನಡೆಯುವ ಹಂತದಲ್ಲೇ ತಾವು ಅಧ್ಯಯನ ಕೇಂದ್ರಗಳಿಗೆ ಪಾವತಿಸಿರುವ ಶುಲ್ಕ ವಿಶ್ವವಿದ್ಯಾಲಯಕ್ಕೆ ಸಂದಾಯವಾಗಿಲ್ಲ ಎಂಬ ವಿಷಯ ವಿದ್ಯಾರ್ಥಿಗಳಿಗೆ ತಿಳಿದು ಅಧ್ಯಯನ ಕೇಂದ್ರಗಳಿಗೆ ಭೇಟಿ ನೀಡಿ ವಿಚಾರಿಸುವಂತೆ ಮಾಡಬೇಕು ಎಂದು ಹೇಳಿದರು.

ಜಂಟಿ ನಿರ್ದೇಶಕರು ಮಾತನಾಡಿ ದೂರ ಶಿಕ್ಷಣದ ವಿಷಯಕ್ಕೆ ಸಂಬಂಧಿಸಿದಂತೆ ಇನ್ನೊಂದು ಸಭೆ ಕರೆಯುವುದು ಒಳ್ಳೆಯದು ಎಂದು ಹೇಳಿದರು.

ನಂತರ ಅಜೆಂಡಾದಲ್ಲಿರುವಂತೆ ವಿಷಯಗಳನ್ನು ಚರ್ಚೆಗೆ ಕೈಗೆತ್ತಿಕೊಳ್ಳಲಾಯಿತು.

## ಪ್ರಾಧಿಕಾರಗಳ ವಿಭಾಗ

**2022–ಸಿಂ–8.06:**2021–22ನೇ ಆರ್ಥಿಕ ಸಾಲಿನ ವಾರ್ಷಿಕ ವರದಿ ಅನುಮೋದನೆ ಕುರಿತು.

**ನಿರ್ಣಯ :** 2021–22ನೇ ಆರ್ಥಿಕ ಸಾಲಿನ ವಾರ್ಷಿಕ ವರದಿಯನ್ನು ಸಭೆಯು ಅನುಮೋದಿಸಿತು.

**2022–ಸಿಂ–8.07:** Statute for the Establishment of "Gamaka Adhyayana mathu Samshidhana Kendra"

**ನಿರ್ಣಯ :** ಗಮಕ ಅಧ್ಯಯನ ಮತ್ತು ಸಂಶೋಧನಾ ಪೀಠವನ್ನು ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸಲು ಸಭೆಯು ಅನುಮತಿ ನೀಡಿ ಇದಕ್ಕೆ ಸಂಬಂಧಿಸಿದ ಪರಿನಿಯಮವನ್ನು ಕೆಲವೊಂದು ತಿದ್ದುಪಡಿಗಳೊಂದಿಗೆ ಅನುಮೋದಿಸಿತು.

**2022–ಸಿಂ–8.08** :Revised Statutes Governing the Institution of Research Fellowship in P.G.Department of Kuvempu University

**ನಿರ್ಣಯ :** ಚರ್ಚೆಯ ನಂತರ ಸದರಿ ಪರಿನಿಯಮವನ್ನು ಸಿಂಡಿಕೇಟ್ ಅನುಮೋದಿಸಿತು.

## ಮಾನವ ಸಂಪನ್ಮೂಲ ಮತ್ತು ನಿರ್ವಹಣೆ ವಿಭಾಗ

**2022–ಸಿಂ–8.09:** ಸತ್ಯಾಸತ್ಯೆತೆ ಪರಿಶೀಲನೆ ಸಮಿತಿಯ ವರದಿಯನ್ನು ಸಿಂಡಿಕೇಟ್ ಸಭೆಗೆ ಮಂಡಿಸುವ ಕುರಿತು.

**ಚರ್ಚೆ:** ಕುಲಸಚಿವರು ಮಾತನಾಡಿ ಸತ್ಯಾಸತ್ಯೆತೆ ಪರಿಶೀಲನಾ ಸಮಿತಿಯು ನೀಡಿರುವ ವರದಿಯನ್ನು ಸಿಂಡಿಕೇಟ್ ಸಭೆಗೆ ಮಂಡಿಸಲಾಗಿದೆ ಎಂದು ತಿಳಿಸಿ ಮುಚ್ಚಿದ ಲಕೋಟೆಯನ್ನು ಸಭೆಯಲ್ಲಿ ಎಲ್ಲರ ಸಮ್ಮುಖದಲ್ಲಿ ತೆರೆದರು. ಯಾವ ಸಮಿತಿ ಎಂದು ಕೆಲವು ಸದಸ್ಯರು ಪ್ರಶ್ನಿಸಿದ್ದರಿಂದ ಕುಲಸಚಿವರು ಇದಕ್ಕೆ ಉತ್ತರಿಸುತ್ತಾ ಸಮಿತಿಯ ಸದಸ್ಯರ ಹೆಸರನ್ನು ಸಭೆಯಲ್ಲಿ ಓದಿದರು. ಸಮಿತಿಯ ಅಧ್ಯಕ್ಷರಾದ ಶ್ರೀ ಹೆಚ್.ಬಿ. ರಮೇಶ್‌ಬಾಬುರವರು ಸಮಿತಿಯು ನೀಡಿರುವ ವರದಿಯನ್ನು ಸಂಕ್ಷಿಪ್ತವಾಗಿ ಓದಿದರು.

ಕುಲಸಚಿವರು ಮಾತನಾಡಿ ಸತ್ಯಾಸತ್ಯತೆ ಪರಿಶೀಲಿಸುವ ಸಂಬಂಧ ಸದರಿ ನೌಕರರನ್ನು ಕರೆಸಿ ಅವರ ಅಭಿಪ್ರಾಯವನ್ನು ಪಡೆಯಬೇಕಾಗಿರುತ್ತದೆ ಇಲ್ಲವಾದಲ್ಲಿ ಏಕಪಕ್ಷೀಯವಾಗಿ ವರದಿ ನೀಡಿದಂತೆ ಆಗುತ್ತದೆ ಎಂದು ಹೇಳಿದರು.

ಜಂಟಿ ನಿರ್ದೇಶಕರಾದ ಶ್ರೀ ರಾಜಶೇಖರ್ ಹೆಬ್ಬಾರ್ ಸಿ. ರವರು ಮಾತನಾಡಿ ಈ ಆಧಾರದ ಮೇಲೆ ಸದರಿ ನೌಕರರಿಗೆ ನೋಟಿಸ್ ನೀಡಿ ಅವರಿಂದ ಅಭಿಪ್ರಾಯ ಪಡೆಯಬೇಕು ಇಲ್ಲವಾದಲ್ಲಿ ಕುಲಸಚಿವರು ಹೇಳಿದಂತೆ ಏಕಪಕ್ಷೀಯವಾಗಿ ವರದಿ ನೀಡಿದಂತೆ ಆಗುತ್ತದೆ ಎಂದು ಹೇಳಿದರು.

ಸದಸ್ಯರಾದ ಡಾ. ಧನಂಜಯ್ ಬಿ.ಜಿ. ರವರು ಮಾತನಾಡಿ ಇದು ಬಹಳ ವರ್ಷಗಳ ಹಿಂದಿನ ವಿಷಯವಾಗಿದ್ದು. ವಿಶ್ವವಿದ್ಯಾಲಯ ಪ್ರಾರಂಭವಾದಾಗ, ಅವರ ನೇಮಕಾತಿ ಆಗಬೇಕಾದರೆ ಯಾವ ನಿಯಮ ಅನುಸರಿಸಲಾಗಿತ್ತು, ದಿನಗೂಲಿಯ ಮೇಲೆ ಕೆಲಸ ಮಾಡುತಿದ್ದವರೆನ್ನೆಲ್ಲಾ ಖಾಯಂಗೊಳಿಸಲಾಗಿತ್ತೇ/ವಿಲಿನೀಕರಣಗೊಳಿಸಲಾಗಿತ್ತೇ ಎಂಬುದನ್ನು ಪರಿಶೀಲಿಸಬೇಕಾಗುತ್ತದೆ ಎಂದು ಹೇಳಿದರು.

ಸದಸ್ಯರಾದ ಶ್ರೀ ಹೆಚ್ .ರಾಮಲಿಂಗಪ್ಪರವರು ಮಾತನಾಡಿ ವಿಶ್ವವಿದ್ಯಾಲಯ ಪ್ರಾರಂಭವಾದಾಗ, ಅವರ ನೇಮಕಾತಿ ಸಂದರ್ಶನಕ್ಕೆ ಹಾಜರಾಗಿದ್ದರು ಆದರೆ ಅರ್ಹತೆ ಇಲ್ಲ ಎಂಬ ಕಾರಣಕ್ಕಾಗಿ ನೇಮಕಾತಿಗೆ ಪರಿಗಣಿಸಿರಲಿಲ್ಲ. ಆದರೆ ನಂತರದಲ್ಲಿ ಪರಿಶಿಷ್ಟ ಜಾತಿಯ ಹುದ್ದೆಗೆ ಎದುರಾಗಿ ಸದರಿಯವರ ನೇಮಕಾತಿ ಹೊಂದಿದ್ದಾರೆ ಎಂದರು.

ಸದಸ್ಯರಾದ ಶ್ರೀ ಬಿ.ಸಿ. ಬಸವರಾಜ್‌ರವರು ಮಾತನಾಡಿ ನೇಮಕಾತಿ ಆಗಿ ಎಷ್ಟು ವರ್ಷ ಆಗಿದೆ ಇದುವರೆಗೂ ಯಾಕೆ ಕ್ರಮ ಕೈಗೊಂಡಿಲ್ಲ, ಅಲ್ಲದೇ ಈ ವಿಷಯವನ್ನು ಕಾನೂನಾತ್ಮಕವಾಗಿ ಪರಿಶೀಲಿಸಿ ನಿಯಮಗಳು ಏನಿತ್ತು ಎಂಬುದನ್ನು ಪರಿಶೀಲಿಸಬೇಕು ಎಂದು ಹೇಳಿದರು.

ಸದಸ್ಯರಾದ ಶ್ರೀ ಹೆಚ್.ಬಿ. ರಮೇಶ್ ಬಾಬುರವರು ಮಾತನಾಡಿ ಇದು ಒಂದೇ ವಿಷಯವಲ್ಲ ವಿಚಾರಣೆಗೆ ಇನ್ನೂ ಕೆಲವು ವಿಷಯಗಳು ಇದೆ ಎಂದರು.

ಜಂಟಿ ನಿರ್ದೇಶಕರಾದ ಶ್ರೀ ರಾಜಶೇಖರ್ ಹೆಬ್ಬಾರ್ ಸಿ. ರವರು ವಿಚಾರಣೆ ನಡೆಸಿ ಎಂದು ಹೇಳಿದರು.

ನಿರ್ಣಯ:ಸಮಿತಿಯು ನೀಡಿದ ವರದಿಯನ್ನು ಸಭೆಯಲ್ಲಿ ಸಂಕ್ಷಿಪ್ತವಾಗಿ ಓದಲಾಯಿತು. ಚರ್ಚೆಯ ನಂತರ ಸಮಿತಿಯು ನೀಡಿದ ವರದಿಯ ಆಧಾರದ ಮೇಲೆ ನಿಯಮಾನುಸಾರ ಪರಿಶೀಲಿಸಿ ಕ್ರಮಕೈಗೊಳ್ಳಲು ಸಭೆಯು ಅನುಮತಿ ನೀಡಿತು.

**ಹಣಕಾಸು ವಿಭಾಗ**

**2022–ಸಿಂ–8.25:**2021–22ನೇ ಆರ್ಥಿಕ ವರ್ಷದ ವಾರ್ಷಿಕ ಲೆಕ್ಕಗಳ ಪರಿಶೀಲನೆ ಮತ್ತು ಅನುಮೋದನೆ ಕುರಿತು.

ನಿರ್ಣಯ :2021–22ನೇ ಆರ್ಥಿಕ ವರ್ಷದ ವಾರ್ಷಿಕ ಲೆಕ್ಕಗಳ ವರದಿಯನ್ನು ಸಭೆಯು ಅನುಮೋದಿಸಿತು.

**ದೂರ ಶಿಕ್ಷಣ ನಿರ್ದೇಶನಾಲಯ**

**2022–ಸಿಂ–8.18:**2020–21ನೇ ಸಾಲಿನ ಅವೃತ್ತಿ–1 ಅವೃತ್ತಿ–2 ದ್ವಿತೀಯ ವರ್ಷದ ವಿದ್ಯಾರ್ಥಿಗಳ ದಂಡ ಶುಲ್ಕ ಕಡಿತ ಹಾಗೂ ಷೇರು ಮೊತ್ತ ಹೊಂದಾಣಿಕೆ ಹಾಗೂ ಶೇ.50ರ ಪ್ರವೇಶಾತಿ ಶುಲ್ಕ ಪಾವತಿಸಲು ಅವಕಾಶ ನೀಡಲು ಕೋರಿರುವ ಮನವಿಯ ಬಗ್ಗೆ ಚರ್ಚಿಸುವ ಕುರಿತು.

ನಿರ್ಣಯ : ಚರ್ಚೆಯ ನಂತರ 2020–21ನೇ ಸಾಲಿನ ಅವೃತ್ತಿ–1 ಅವೃತ್ತಿ–2 ದ್ವಿತೀಯ ವರ್ಷದ ವಿದ್ಯಾರ್ಥಿಗಳ ದಂಡ ಶುಲ್ಕ ಕಡಿತ ಹಾಗೂ ಷೇರು ಮೊತ್ತ ಹೊಂದಾಣಿಕೆ ಹಾಗೂ ಶೇ.50ರ ಪ್ರವೇಶಾತಿ ಶುಲ್ಕ ಪಾವತಿಸಲು ಅವಕಾಶ ನೀಡಲು ಕೋರಿರುವ ಮನವಿಯನ್ನು ಪುರಸ್ಕರಿಸದಿರಲು ಸಭೆಯು ನಿರ್ಣಯಿಸಿತು

**2022–ಸಿಂ–8.19:**ಕುವೆಂಪು ವಿಶ್ವವಿದ್ಯಾಲಯದ ಆನ್‌ಲೈನ್ ಕೋರ್ಸ್‌ಗಳಿಗೆ ಪಠ್ಯಕ್ರಮ ವಿಂಗಡಣೆ, ಇ–ಅಧ್ಯಯನ ಸಾಮಗ್ರಿ (e-content) ಸಿದ್ಧಪಡಿಸುವಿಕೆ ಮತ್ತು Learners Management System(LMS),Software & Hardwareಗಳನ್ನು ವ್ಯವಸ್ಥೆ ಮಾಡಿಕೊಳ್ಳುವ ಕುರಿತು.

ನಿರ್ಣಯ: ಈಗಾಗಲೆ ಸಾಕಷ್ಟು ವಿಳಂಬವಾಗಿರುವ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯದ ಆನ್‌ಲೈನ್ ಕೋರ್ಸ್‌ಗಳಿಗೆ ಪಠ್ಯಕ್ರಮ ವಿಂಗಡಣೆ, ಇ–ಅಧ್ಯಯನ ಸಾಮಗ್ರಿ(e-content) ಸಿದ್ಧಪಡಿಸುವಿಕೆ ಮತ್ತು Learners Management System(LMS),Software & Hardwareಗಳನ್ನು ವ್ಯವಸ್ಥೆ ಮಾಡಿಕೊಳ್ಳಲು ಸಭೆಯು ಅನುಮತಿ ನೀಡಿತು.

**ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡಗಳ ಅಭಿವೃಧಿ ಘಟಕ**

**2022–ಸಿಂ–8.30:** ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡ ಸಂಶೋಧನಾರ್ಥಿಗಳ ಶಿಷ್ಯವೇತನ ದರವನ್ನು ಪರಿಷ್ಕರಿಸುವ ಕುರಿತು.

ನಿರ್ಣಯ : ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡ ಸಂಶೋಧನಾರ್ಥಿಗಳ ಶಿಷ್ಯವೇತನಗಳ ದರವನ್ನು ಪರಿಷ್ಕರಿಸಿ ಸೆಪ್ಟೆಂಬರ್ ಮಾಹೆಯಿಂದ ಅನ್ವಯವಾಗುವಂತೆ ಪಾವತಿಸಲು ಸಭೆಯು ನಿರ್ಣಯಿಸಿತು.

**2022-ಸಿಂ-8.33: ಸದಸ್ಯರುಗಳು ಮಂಡಿಸಿರುವ ಪ್ರಸ್ತಾವನೆಗಳು:**

1. **ಶ್ರೀಮತಿ ಕಿರಣ್ ರವೀಂದ್ರ ದೇಸಾಯಿ:**

ಸದಸ್ಯರಾದ ಶ್ರೀಮತಿ ಕಿರಣ್ ರವೀಂದ್ರ ದೇಸಾಯಿಯವರು ಮಾತನಾಡಿ ಕೆಳದಿ ವಸ್ತು ಸಂಗ್ರಹಾಲಯಕ್ಕೆ ಕ್ಯುರೇಟರ್‌ನ್ನು ತಕ್ಷಣ ನೇಮಿಸಬೇಕು. ಇದಕ್ಕೆ ಸೂಕ್ತ ಅಭ್ಯರ್ಥಿಯನ್ನು ಸೂಚಿಸಿದರೂ ಸಹ ಇದುವರೆಗೂ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ ಎಂದು ಹೇಳಿದರು.

ನಿರ್ಣಯ: ಕುಲಸಚಿವರು ನಿಯಮಾನುಸಾರ ಪರಿಶೀಲಿಸಿ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

2. **ಶ್ರೀ ಬಳ್ಳೇಕೆರೆ ಸಂತೋಷ್:**

1) ಸದಸ್ಯರಾದ ಶ್ರೀ ಬಳ್ಳೇಕೆರೆ ಸಂತೋಷ್‌ರವರು ಮಾತನಾಡಿ ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ಗುಂಜಾಳ್‌ರವರು ಅವರ ಸಮಸ್ಯೆ ಬಗೆಹರಿಸುವಂತೆ ತಮ್ಮನ್ನು ಕೋರಿರುತ್ತಾರೆ ಎಂದು ಸಭೆಗೆ ತಿಳಿಸಿದರು.

ಸದಸ್ಯರಾದ ಶ್ರೀಮತಿ ಕಿರಣ್ ರವೀಂದ್ರ ದೇಸಾಯಿಯವರು ಮಾತನಾಡಿ ಈ ವಿಷಯವು ಸಿಂಡಿಕೇಟ್ ಸಭೆಯ ವ್ಯಾಪ್ತಿಗೆ ಬರದೇ ಇರುವುದರಿಂದ ಇಲ್ಲಿ ಚರ್ಚಿಸುವುದು ಸರಿಯಲ್ಲ ವೈಯಕ್ತಿಕವಾಗಿ ಕೇಳಿ ಎಂದು ಹೇಳಿದರು.

ಸದಸ್ಯರಾದ ಶ್ರೀ ಜಿ. ಧರ್ಮಪ್ರಸಾದ್‌ರವರು ಮಾತನಾಡಿ ಪ್ರೊ. ಗುಂಜಾಳ್‌ರವರು ಅವರ ಸಮಸ್ಯೆಯ ಕುರಿತು ಲೋಕಾಯುಕ್ತಕ್ಕೆ ದೂರು ಸಲ್ಲಿಸುವುದು ಸೂಕ್ತ ಎಂದರು. ಜಂಟಿ ನಿರ್ದೇಶಕರು ಹಾಗೂ ಶ್ರೀಮತಿ ಭಾರತಿಯವರು ಕೂಡ ಇದಕ್ಕೆ ಧ್ವನಿಗೂಡಿಸಿದರು.

ಸದಸ್ಯರಾದ ಶ್ರೀ ಬಿ. ನಿರಂಜನಮೂರ್ತಿಯವರು ಮಾತನಾಡಿ ಮೇಲ್ಕಂಡ ಪ್ರಾಧ್ಯಾಪಕರು ಮಾಡಿರುವುದು ಅಪರಾಧ ಎಂದು ಹೇಳಿದರು.

ಸದಸ್ಯರಾದ ಶ್ರೀ ಬಳ್ಳೇಕೆರೆ ಸಂತೋಷ್‌ರವರು ಮಾತನಾಡಿ ಅನುಕಂಪದ ಆಧಾರದ ನೇಮಕಾತಿಯ ಕಡತವನ್ನು ಸಹ ಉದ್ದೇಶಪೂರ್ವಕವಾಗಿ ಕುಲಪತಿಯವರು ವಿಳಂಬ ಮಾಡಿರುತ್ತಾರೆ ಎಂದರು.

ನಿರ್ಣಯ: ಕುಲಸಚಿವರು ಮಾತನಾಡಿ ಲಿಖಿತವಾಗಿ ಪ್ರೊ. ಗುಂಜಾಳ್‌ರವರು ಯಾವುದೇ ಮನವಿಯನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿರುವುದಿಲ್ಲ. ಆದರೂ ಈ ವಿಷಯವು ಮಾನ್ಯ ಕುಲಪತಿಗಳಿಗೆ ಸಂಬಂಧಿಸಿರುವುದರಿಂದ ಅವರು ಬಗೆಹರಿಸಬೇಕೆಂದು ತಿಳಿಸಿದರು.

**2) ಸಹ್ಯಾದ್ರಿ ವಿಜ್ಞಾನ ಕಾಲೇಜಿನ ಪ್ರಾಂಶುಪಾಲರ ನೇಮಕಾತಿ.**

ಸದಸ್ಯರಾದ ಶ್ರೀ ಬಳ್ಳೇಕೆರೆ ಸಂತೋಷ್‌ರವರು ಮಾತನಾಡಿ ಸಹ್ಯಾದ್ರಿ ವಿಜ್ಞಾನ ಕಾಲೇಜಿಗೆ ಪ್ರಾಂಶುಪಾಲರ ನೇಮಕಾತಿ ಮಾಡುವ ಸಂಬಂಧ ಸಂದರ್ಶನಕ್ಕೆ ದಿನಾಂಕ ನಿಗದಿಪಡಿಸಬೇಕೆಂದು ಕೋರಿದರು.

ನಿರ್ಣಯ: ದಿನಾಂಕ:05-11-2022ರಂದು ಸಹ್ಯಾದ್ರಿ ವಿಜ್ಞಾನ ಕಾಲೇಜಿಗೆ ಪ್ರಾಂಶುಪಾಲರ ನೇಮಕಾತಿಯ ಸಂದರ್ಶನ ಏರ್ಪಡಿಸಲು ಸಭೆಯು ನಿರ್ಣಯಿಸಿತು.

3) ಸದಸ್ಯರಾದ ಶ್ರೀ ಬಳ್ಳೇಕೆರೆ ಸಂತೋಷ್‌ರವರು ಮಾತನಾಡಿ 371ಜೆ ಮೂಲಕ ನೇಮಕಾತಿ ಹೊಂದಿದ ಅಧ್ಯಾಪಕೇತರ ನೌಕರರ ಮುಂಬಡ್ತಿಗಾಗಿ ಡಿ.ಪಿ.ಸಿ ಸಭೆಗೆ ದಿನಾಂಕ ನಿಗದಿಪಡಿಸಬೇಕೆಂದು ಕೋರಿದರು.

ನಿರ್ಣಯ: ದಿನಾಂಕ:15-11-2022ರಂದು 371ಜೆ ಮೂಲಕ ನೇಮಕಾತಿ ಹೊಂದಿದ ಅಧ್ಯಾಪಕೇತರ ನೌಕರರ ಮುಂಬಡ್ತಿಗಾಗಿ ಡಿ.ಪಿ.ಸಿ ಸಭೆ ಏರ್ಪಡಿಸಲು ಸಭೆಯು ನಿರ್ಣಯಿಸಿತು.

3. **ಶ್ರೀ ರಾಮಲಿಂಗಪ್ಪ ಹೆಚ್:**

ಸದಸ್ಯರಾದ ಶ್ರೀ ಹೆಚ್. ರಾಮಲಿಂಗಪ್ಪರವರು ಮಾತನಾಡಿ ಡಾ. ಪಿ. ನಿರಂಜನ್, ಪ್ರಾಧ್ಯಾಪಕರು ಇವರ ಪ್ರಾಜೆಕ್ಟ್‌ಗೆ ಸಂಬಂಧಿಸಿದಂತೆ VGST- CESEM ಸಂಸ್ಥೆಯು ಮಂಜೂರು ಮಾಡಿರುವ ಹಣದಲ್ಲಿ ಸಂಶೋಧನೆಗೆ ಸಂಬಂಧಿಸಿದ ಉಪಕರಣಗಳು ಹಾಗೂ ರಸಾಯನಿಕ ಕೆಮಿಕಲ್ಸ್‌ಗಳನ್ನು ಖರೀದಿಸಿ ಬಿಲ್ಲುಗಳ

ಪಾವತಿಗೆ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲಾಗಿದೆ, ಆದರೆ ಬಿಲ್ಲುಗಳ ಪಾವತಿಯಲ್ಲಿ ವಿಳಂಬವಾಗುತ್ತಿದೆ. ಈಗ ಮುಂದಿನ ಕಂತಿನ ಹಣ ಬಿಡುಗಡೆಗೊಳಿಸುವ ಸಂಬಂಧ ಉಪಯೋಗಿತ ಪ್ರಮಾಣ ಪತ್ರವನ್ನು ಹಾಗೂ ಇತರ ಮಾಹಿತಿಯನ್ನು ಸಂಸ್ಥೆಯವರು ಕೇಳುತ್ತಿರುವುದರಿಂದ ವಿಳಂಬವಾಗಿರುವ ಬಿಲ್ಲುಗಳ ಪಾವತಿ ಹಾಗೂ ಉಪಯೋಗಿತ ಪ್ರಮಾಣ ಪತ್ರ ಶೀಘ್ರವಾಗಿ ನೀಡಲು ಸಂಸ್ಥೆಯವರು ಕೋರಿರುತ್ತಾರೆ. ಇದನ್ನು ಶೀಘ್ರವಾಗಿ ಪರಿಹರಿಸುವಂತೆ ಸದರಿಯವರು ಕೋರಿರುತ್ತಾರೆ ಎಂದು ತಿಳಿಸಿದರು.

ಸದಸ್ಯರಾದ ಶ್ರೀ. ಧರ್ಮಪ್ರಸಾದ್‌ರವರೂ ಸಹ ಮೇಲ್ಕಂಡ ಅಧ್ಯಾಪಕರ ಮನವಿಯನ್ನು ಶೀಘ್ರವಾಗಿ ಪರಿಶೀಲಿಸುವಂತೆ ಕೋರಿದರು.

ನಿರ್ಣಯ: ಶೀಘ್ರವಾಗಿ ಬಿಲ್ಲುಗಳ ಪಾವತಿಗೆ ಹಾಗು ಉಪಯೋಗಿತ ಪ್ರಮಾಣಪತ್ರ ನೀಡಲು ಕ್ರಮ ಕೈಗೊಳುವಂತೆ ಸಭೆಯು ಸೂಚಿಸಿತು.

4. **ಶ್ರೀ ರಮೇಶ್ ಬಾಬು:**

**1) ಲೈಂಗಿಕ ಹಗರಣದ ಆರೋಪಿಯ ಮೇಲೆ ಎಫ್.ಐ.ಆರ್ ದಾಖಲಿಸುವುದರ ಬಗ್ಗೆ.**

ಶ್ರೀ ಹೆಚ್.ಬಿ. ರಮೇಶ್ ಬಾಬುರವರು ಮಾತನಾಡಿ ವಿಶ್ವವಿದ್ಯಾಲಯದ ಲೈಂಗಿಕ ಹಗರಣದ ಆರೋಪಿಯ ಮೇಲೆ ಎಫ್.ಐ.ಆರ್. ದಾಖಲಿಸಬೇಕು ಎಂದು ತಿಳಿಸಲಾಗಿತ್ತು. ಆದರೆ ಇದರ ಬಗ್ಗೆ ಏಕೆ ಕ್ರಮ ತೆಗೆದುಕೊಂಡಿಲ್ಲ ಎಂದರು.

ಜಂಟಿ ನಿರ್ದೇಶಕರಾದ ಶ್ರೀ ರಾಜಶೇಖರ್ ಹೆಬ್ಬಾರ್ ಸಿ. ರವರು ಈ ಬಗ್ಗೆ ಆಂತರಿಕ ಸಮಿತಿಯಲ್ಲಿ ಚರ್ಚೆ ಆಗಿದೆಯೇ ಎಂದು ಕೇಳಿದರು.
ಸದಸ್ಯರಾದ ಶ್ರೀ ಜಿ. ಧರ್ಮಪ್ರಸಾದ್‌ರವರು ಮಾತನಾಡಿ ಸಮಿತಿಯ ವರದಿಯಲ್ಲಿ ಎಫ್.ಐ.ಆರ್. ದಾಖಲಿಸಬೇಕು ಎಂದು ಹೇಳಿಲ್ಲ ಆದರೆ, ಸಮಿತಿಯ ವರದಿಯ ಆಧಾರದ ಮೇಲೆ ಹೆಚ್ಚಿನ ಪರಿಶೀಲನೆಗಾಗಿ ಫೋರೆನ್ಸಿಕ್ ವಿಭಾಗಕ್ಕೆ ಕಳುಹಿಸಬೇಕಾಗಿರುತ್ತದೆ. ಫೋರೆನ್ಸಿಕ್ ವಿಭಾಗಕ್ಕೆ ಕಳುಹಿಸಬೇಕು ಎಂದರೆ ಎಫ್.ಐ.ಆರ್. ಆಗಿರಬೇಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಎಫ್.ಐ.ಆರ್. ದಾಖಲಿಸುವುದು ಅನಿವಾರ್ಯವಾಗಿದೆ ಎಂದು ಹೇಳಿದರು.
ಸದಸ್ಯರಾದ ಶ್ರೀ ಬಳ್ಳೇಕೆರೆ ಸಂತೋಷ್‌ರವರು ಮಾತನಾಡಿ ಈ ವಿಷಯದಲ್ಲಿ ಮೃದು ಧೋರಣೆ ತಳೆಯುವುದು ಸರಿಯಲ್ಲ ಯಾವ ಹೆಣ್ಣುಮಕ್ಕಳಾದರೂ ಸರಿ ನ್ಯಾಯ ಸಿಗಲೇಬೇಕು ಎಂದು ಹೇಳಿದರು.

ಕುಲಸಚಿವರು ಮಾತನಾಡಿ ಎಫ್.ಐ.ಆರ್. ದಾಖಲಿಸಲು ನಿಯಮಾನುಸಾರ ನೇಮಕಾತಿ ಪ್ರಾಧಿಕಾರವಾದ ಸಿಂಡಿಕೇಟ್ ಸಭೆಯ ಅನುಮತಿ ಬೇಕಾಗುತ್ತದೆ ಎಂದು ಹೇಳಿದರು.

ಸದಸ್ಯರಾದ ಶ್ರೀ ಹೆಚ್.ಬಿ. ರಮೇಶ್ ಬಾಬುರವರು, ಶ್ರೀ ಧರ್ಮಪ್ರಸಾದ್‌ರವರು ಹಾಗೂ ಶ್ರೀ ರಾಮಲಿಂಗಪ್ಪರವರು ಮಾತನಾಡಿ ಎಫ್.ಐ.ಆರ್. ದಾಖಲಿಸಲು ನಮ್ಮೆಲ್ಲರ ಒಪ್ಪಿಗೆ ಇದೆ ಎಂದು ಹೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ ಸದರಿ ವ್ಯಕ್ತಿಯು ಆರೋಪಿ ಮಾತ್ರ ಆರೋಪ ಪ್ರೂವ್ ಆಗಿಲ್ಲ ಆದ್ದರಿಂದ ಈ ಕುರಿತು ಪೋಲೀಸ್ ಅಧೀಕ್ಷಕರು ಇವರಿಗೆ ಪತ್ರ ಬರೆದು ಮುಂದಿನ ಕ್ರಮದ ಬಗ್ಗೆ ಮಾಹಿತಿ ತರಿಸಿಕೊಳ್ಳುವುದು ಸೂಕ್ತ ಎಂದು ಹೇಳಿದರು.

ಸದಸ್ಯರಾದ ಶ್ರೀ ಎಸ್. ಎಂ. ನಟೇಶ್‌ರವರು ಮಾತನಾಡಿ ಈ ರೀತಿ ಮಾಡಿದರೆ ಆಗ ಪೋಲೀಸ್ ಇಲಾಖೆಯವರು ಸುಮೋಟೋ ಕೇಸ್ ದಾಖಲಿಸಿಕೊಳ್ಳುತ್ತಾರೆ ಎಂದು ಹೇಳಿದರು.

ಸದಸ್ಯರಾದ ಶ್ರೀ ಜಿ. ಧರ್ಮಪ್ರಸಾದ್‌ರವರು ಮಾತನಾಡಿ ಎಲ್ಲ ಸದಸ್ಯರು ಒಪ್ಪಿಗೆ ಸೂಚಿಸಿರುವುದರಿಂದ ಎಫ್.ಐ.ಆರ್. ದಾಖಲಿಸುವುದು ಸೂಕ್ತ ಎಂದು ಹೇಳಿದರು.

ಮಾನ್ಯ ಕುಲಪತಿಗಳು ಪುನ: ಮಾತನಾಡಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕರೊಬ್ಬರ ಮೇಲೆ ಆಪಾದನೆ ಇದ್ದು ಕ್ರಮ ಕೈಗೊಳ್ಳಬೇಕಾಗಿರುವುದರಿಂದ ಪೊಲೀಸ್ ಇಲಾಖೆಯಿಂದ ಅನುಮತಿ ಪಡೆಯುವುದು ಸೂಕ್ತ, ಇದು ಅತ್ಯಂತ ಸೂಕ್ಷ್ಮ ವಿಷಯ ಎಫ್.ಐ.ಆರ್. ದಾಖಲಿಸಿದ ಕೂಡಲೇ ಎಲ್ಲಾ ಸುದ್ದಿ ಮಾಧ್ಯಮಗಳಲ್ಲಿ ವಿಷಯ ಪ್ರಕಟವಾಗುತ್ತದೆ, ವಿಶ್ವವಿದ್ಯಾಲಯಕ್ಕೆ ಕೆಟ್ಟ ಹೆಸರು ಬರುತ್ತದೆ ಎಂದು ಹೇಳಿದರು.

ಸದಸ್ಯರಾದ ಶ್ರೀ ಎನ್. ಆರ್. ಮಂಜುನಾಥ್‌ರವರು ಮಾತನಾಡಿ ಎಫ್.ಐ.ಆರ್. ಎನ್ನುವುದು ಶಿಕ್ಷೆ ಅಲ್ಲ ವಿಚಾರಣೆ ಆಗಿ ಆರೋಪ ಸಾಬೀತಾದರೆ ಮಾತ್ರ ಮುಂದಿನ ಕ್ರಮ ಜರುಗಿಸಲಾಗುತ್ತದೆ ಎಂದು ಹೇಳಿದರು.

ಸದಸ್ಯರಾದ ಶ್ರೀ ಜಿ. ಧರ್ಮಪ್ರಸಾದ್‌ರವರು ಮಾತನಾಡಿ ಸದರಿ ಪ್ರಾಧ್ಯಾಪಕರನ್ನು ವಿಚಾರಣಾ ಸಮಿತಿಯ ಮುಂದೆ ಕರೆಸಿ ಅವರಿಗೂ ಕೂಡ ಆಡಿಯೋ ರೆಕಾರ್ಡಿಂಗ್ ಧ್ವನಿಯನ್ನು ಕೇಳಿಸಲಾಗಿದೆ. ಸಮಿತಿಯು ಎಲ್ಲಾ ನಿಯಮಗಳನ್ನು ಪಾಲಿಸಿದೆ ಎಂದು ಹೇಳಿದರು.

ಮಾನ್ಯ ಕುಲಪತಿಗಳು ಪುನ: ಮಾತನಾಡಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕರ ಮೇಲೆ ಆಪಾದನೆ ಇರುವುದರಿಂದ ವಿಶ್ವವಿದ್ಯಾಲಯಕ್ಕೆ ಕೆಟ್ಟ ಹೆಸರು ಬರುತ್ತದೆ ಎಂದು ಹೇಳಿದರು.

ಸದಸ್ಯರಾದ ಶ್ರೀ ಬಿ. ನಿರಂಜನಮೂರ್ತಿಯವರು ಮಾತನಾಡಿ ಈ ವಿಷಯದ ಕುರಿತು ಇಷ್ಟು ಚರ್ಚೆ ಮಾಡುವ ಅಗತ್ಯವಿಲ್ಲ. ಈಗಾಗಲೇ ಸಮಿತಿ ವರದಿ ಕೊಟ್ಟಿದೆ. ಎಫ್.ಐ.ಆರ್. ಹಾಕಿದಾಕ್ಷಣ ಅಪರಾಧಿಯಲ್ಲ. ಆದರೆ ಫೋರೆನ್ಸಿಕ್ ಪರಿಶೀಲನೆಗೆ ಕಳುಹಿಸಬೇಕು ಎಂದರೆ ಎಫ್.ಐ.ಆರ್. ಹಾಕಲೇಬೇಕಾಗುತ್ತದೆ ಎಂದು ಹೇಳಿದರು..

ಶ್ರೀಮತಿ ಕಿರಣ್ ರವೀಂದ್ರ ದೇಸಾಯಿಯವರು ಕಾನೂನು ಅಭಿಪ್ರಾಯ ಏನಿದೆ ಸಭೆಯಲ್ಲಿ ಓದಿ ಎಂದರು.

ಕುಲಸಚಿವರು ಕಾನೂನು ಅಭಿಪ್ರಾಯ ಸಭೆಯಲ್ಲಿ ಓದಿದರು.

ಜಂಟಿ ನಿರ್ದೇಶಕರಾದ ಶ್ರೀ ರಾಜಶೇಖರ್ ಹೆಬ್ಬಾರ್ ಸಿ. ರವರು ಸಮಿತಿ ರಚಿಸಿ ಸಮಿತಿಯ ವರದಿ ನೀಡಿದ ಮೇಲೆ ಏನೂ ಕ್ರಮ ಕೈಗೊಳ್ಳದಿದ್ದಲ್ಲಿ ಯಾಕೆ ಕ್ರಮ ಕೈಗೊಂಡಿಲ್ಲ ಎಂದು ವಿಶ್ವವಿದ್ಯಾಲಯದ ಮೇಲೆ ವಿಚಾರಣೆಗೆ ಬರುತ್ತದೆ. ಆದ್ದರಿಂದ ಕ್ರಮ ಕೈಗೊಳ್ಳಬಹುದು ಎಂದರು.

ಮಾನ್ಯ ಕುಲಪತಿಗಳು ಪುನ: ಮಾತನಾಡಿ ಪೊಲೀಸ್ ಅಧೀಕ್ಷಕರಿಂದ ಲಿಖಿತವಾಗಿ ಅನುಮತಿ ಪಡೆಯುವುದು ಸೂಕ್ತ ಎಂದು ಹೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ಶ್ರೀ ಹೆಚ್.ಬಿ. ರಮೇಶ್ ಬಾಬುರವರು ಇದು ಬಹಳ ಹಳೆಯ ಕೇಸ್ ಆಗಿದ್ದು, ಕಾನೂನು ಅಭಿಪ್ರಾಯ ಪಡೆದಿರುವುದರಿಂದ ಇನ್ನು ವಿಳಂಬ ಮಾಡುವುದು ಸರಿಯಲ್ಲ. ಆದ್ದರಿಂದ 'ಈ ಬಗ್ಗೆ ನಿರ್ಣಯ ಆಗುವವರೆಗೆ ನಾನು ಸಭಾಂಗಣದ ನೆಲಹಾಸಿನ ಮೇಲೆ ಕುಳಿತಿರುತ್ತೇನೆ, ಏಳುವುದಿಲ್ಲ' ಎಂದು ಕುಳಿತರು. ಶ್ರೀ ಹೆಚ್. ರಾಮಲಿಂಗಪ್ಪ ಮತ್ತು ಶ್ರೀ ಬಳ್ಳೇಕೆರೆ ಸಂತೋಷ್‌ರವರು ಸಹ ಇವರೊಂದಿಗೆ ನೆಲಹಾಸಿನ ಮೇಲೆ ಕುಳಿತರು.

ಸದಸ್ಯರಾದ ಶ್ರೀ ಎನ್. ಆರ್. ಮಂಜುನಾಥ್‌ರವರು ಮಾತನಾಡಿ ಪೊಲೀಸ್ ಇಲಾಖೆಯವರು ಕರೆದು ಎಫ್.ಐ.ಆರ್. ದಾಖಲಿಸಿಕೊಳ್ಳುವುದಿಲ್ಲ ವಿಶ್ವವಿದ್ಯಾಲಯವೇ ದೂರು ಕೊಡಬೇಕು ಎಂದು ಹೇಳಿದರು.

ಸದಸ್ಯರಾದ ಶ್ರೀ ಜಿ. ಧರ್ಮಪ್ರಸಾದ್‌ರವರು ಮಾತನಾಡಿ ಸಭೆಯಲ್ಲಿ ನಿರ್ಣಯ ತೆಗೆದುಕೊಳ್ಳಲೇಬೇಕು ಮಾನ್ಯ ಕುಲಪತಿಗಳಿಗೆ ಒಪ್ಪಿಗೆ ಇಲ್ಲದಿದ್ದಲ್ಲಿ ಡೀಸೆಂಟ್ ನೋಟ್ ಕೊಡಲಿ ಎಂದು ಹೇಳಿದರು.

ಮಾನ್ಯ ಕುಲಪತಿಗಳು ಎಫ್.ಐ.ಆರ್. ದಾಖಲಿಸುವುದು ದೊಡ್ಡ ವಿಷಯವಲ್ಲ ಆದರೆ ಸುದ್ದಿ ಮಾಧ್ಯಮಗಳಲ್ಲಿ ಪ್ರಕಟವಾಗಿ ವಿಶ್ವವಿದ್ಯಾಲಯಕ್ಕೆ ಕೆಟ್ಟ ಹೆಸರು ಬರುತ್ತದೆ ಎಂದರು.
ಸುಧೀರ್ಘ ಚರ್ಚೆಯ ನಂತರ ಎಫ್.ಐ.ಆರ್. ದಾಖಲಿಸಲು ಎಲ್ಲರೂ ಒಪ್ಪಿಗೆ ನೀಡಿದರು. ನಂತರ ನೆಲಹಾಸಿನ ಮೇಲೆ ಕುಳಿತ ಸದಸ್ಯರು ಮೇಲೆದ್ದರು.

ನಿರ್ಣಯ: ಸುಧೀರ್ಘ ಚರ್ಚೆಯ ನಂತರ ಸದಸ್ಯರ ಸರ್ವಾನುಮತದ ಒಪ್ಪಿಗೆಯ ಮೇರೆಗೆ ಲೈಂಗಿಕ ಕಿರುಕುಳದ ಆರೋಪ ಎದುರಿಸುತ್ತಿರುವ ಅಧ್ಯಾಪಕರ ವಿರುದ್ಧ ಎಫ್.ಐ.ಆರ್. ದಾಖಲಿಸಲು ಸಭೆಯು ಅನುಮತಿ ನೀಡಿತು.

5. ಶ್ರೀ ಧರ್ಮಪ್ರಸಾದ್:

1) ವಿಲೀನೀಕರಣಗೊಂಡ ನೌಕರರುಗಳಿಗೆ ಸೌಲಭ್ಯಗಳನ್ನು ನೀಡುವ ಕುರಿತು.

ಸದಸ್ಯರಾದ ಶ್ರೀ ಜಿ. ಧರ್ಮಪ್ರಸಾದ್‌ರವರು ಮಾತನಾಡಿ ವಿಲೀನೀಕರಣಗೊಂಡ ನೌಕರರುಗಳಿಗೆ ಸೌಲಭ್ಯಗಳನ್ನು ನೀಡುವ ಕುರಿತು ಸಿಂಡಿಕೇಟ್ ಸಭೆಯು ಚರ್ಚಿಸಿ ತೆಗೆದುಕೊಂಡಿರುವ ನಿರ್ಣಯವು ಬಹಳ ಸಮಯದಿಂದ ಜಾರಿಯಾಗದೇ ಹಾಗೇ ಬಾಕಿ ಇದೆ. ನನ್ನ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿತ್ತು. ಈ ಸಮಿತಿಯ ವರದಿಯಲ್ಲಿ ಎಲ್ಲಾ ಸೌಲಭ್ಯಗಳನ್ನು ವಿಸ್ತರಿಸಬೇಕು ಎಂದು ನಿರ್ಣಯವಾಗಿತ್ತು. ಹಿಂದಿನ ವೇತನ ಬಾಕಿ ಯಾವುದೂ ಬೇಕಾಗಿಲ್ಲ ನಿವೃತ್ತಿ ವೇತನಕ್ಕೆ ಪರಿಗಣಿಸಿದರೆ ಸಾಕು ಅವರು ಕೋರುತ್ತಾ ಇರುವುದು ಅದನ್ನೇ, ಸರ್ಕಾರವೇ 2008ರಲ್ಲಿ ಉಮಾದೇವಿ ಪ್ರಕರಣದ ಅನ್ವಯ ವಿಲೀನೀಕರಣವನ್ನು ಅನುಮೋದಿಸಿರುತ್ತದೆ. ವಿಶ್ವವಿದ್ಯಾಲಯವು ಪ್ರಾರಂಭದಲ್ಲಿ 11 ಸಿಬ್ಬಂದಿಗಳಿಗೆ ಸೇವೆಗೆ ಸೇರಿದಾಗಿನಿಂದ ಎಲ್ಲಾ ಸೌಲಭ್ಯವನ್ನು ವಿಸ್ತರಿಸಿರುತ್ತದೆ. ಆದರೆ ಉಳಿದ ನೌಕರರಿಗೆ ಈ ಸೌಲಭ್ಯ ಕೊಡುವುದಿಲ್ಲ ಎಂದರೆ ಇದಕ್ಕೆ ಅರ್ಥವಿಲ್ಲ. ಸಿಂಡಿಕೇಟ್ ನಿರ್ಣಯವನ್ನು ಏಕೆ ಜಾರಿಗೆ ತಂದಿಲ್ಲ ಎಂದು ಕೇಳಿದರು. ಮುಂದುವರೆದು ಇತ್ತೀಚೆಗೆ ಸರ್ಕಾರವೇ ಸಫಾಯಿ ಕರ್ಮಚಾರಿಗಳನ್ನು ಖಾಯಂಗೊಳಿಸುವುದಾಗಿ ಆದೇಶಿಸಿದೆ. ಆದ್ದರಿಂದ ಸದುದ್ದೇಶದಿಂದ ನಿವೃತ್ತಿ ಸೌಲಭ್ಯಗಳಿಗೆ ಪರಿಗಣಿಸಲು ಕೋರಿದರು.

ಸದಸ್ಯರಾದ ಶ್ರೀ ಹೆಚ್. ರಾಮಲಿಂಗಪ್ಪ ಮಾತನಾಡಿ 1990ರ ಫೆಬ್ರವರಿಯಲ್ಲಿ ಇದೇ ರೀತಿ ಪ್ರಾಥಮಿಕ/ಪ್ರೌಢ ಶಾಲೆಯ ಶಿಕ್ಷಕರನ್ನು ಖಾಯಂ ಮಾಡಿದರು. ಅದರಂತೆ ಈಗಲೂ ಮಾಡಬಹುದು ಎಂದು ಹೇಳಿದರು.

ಕುಲಸಚಿವರು ಮಾತನಾಡಿ ಉಮಾದೇವಿ ಪ್ರಕರಣ 2006ರಲ್ಲಿ ಅದಕ್ಕಿಂತ ಹಿಂದೆ ಮಾಡಿದ ಯಾವುದೇ ನೇಮಕಾತಿಯನ್ನು ಪ್ರಶ್ನೆ ಮಾಡುವಂತಿಲ್ಲ ಎಂದು ಹೇಳಿರುವುದು ಸರಿ. ಆದರೆ 2010ರಲ್ಲಿ ವಿಲೀನೀಕರಣಗೊಂಡ ನೌಕರರ ನೇಮಕಾತಿಯನ್ನು ರದ್ದುಗೊಳಿಸಿ ಸರ್ಕಾರವು ಹೊರಡಿಸಿದ್ದ ಆದೇಶವನ್ನು ಹಿಂಪಡೆಯುವಂತೆ ಕೋರಿ 2019ರಲ್ಲಿ ಸರ್ಕಾರಕ್ಕೆ ಪತ್ರಿಸಲಾಗಿತ್ತು. ಈ ಪತ್ರಕ್ಕೆ ಸಂಬಂಧಿಸಿದಂತೆ ದಿನಾಂಕ:05-01-2021, 09-07-2021, 20-09-2022ರಂದು ಬಂದ ಸರ್ಕಾರದಿಂದ ಪತ್ರಗಳಲ್ಲಿ ವಿಲೀನೀಕರಣಗೊಂಡ ನೌಕರರನ್ನು ಯಾವ ರೀತಿ ವಿಲೀನೀಕರಣಗೊಳಿಸಲಾಗಿದೆ ರೋಸ್ಟರ್ ಪಾಲಿಸಲಾಗಿದಯೇ, ಎಷ್ಟು ಹುದ್ದೆಗಳು ಎಂಬ ಇತ್ಯಾದಿ ಬಗ್ಗೆ ವಿವರವಾದ ಮಾಹಿತಿಗಳನ್ನು ಕಳುಹಿಸಿಕೊಡುವಂತೆ ಕೇಳಿರುತ್ತಾರೆ. ಇವುಗಳಿಗೆ ವಿಶ್ವವಿದ್ಯಾಲಯದಿಂದ ಇದುವರೆಗೂ ಮಾಹಿತಿ ಹೋಗಿಲ್ಲ.

ದಿನಾಂಕ:20-09-2022ರಂದು ಕುಲಸಚಿವರಿಗೆ ಬಂದ ಅರೆ ಸರ್ಕಾರಿ ಪತ್ರವನ್ನು ಕುಲಸಚಿವರ ಗಮನಕ್ಕೆ ಬರದಂತೆ ಇಟ್ಟುಕೊಂಡಿದ್ದು, ನಂತರ ಗಮನಕ್ಕೆ ತಂದಿರುತ್ತಾರೆ ಎಂದು ಹೇಳಿದರು ಹಾಗೂ ದಿನಾಂಕ:20-09-2022ರ ಪತ್ರವನ್ನು ಸಭೆಯಲ್ಲಿ ಓದಿದರು. ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರದಿಂದ ಬರದ ಪತ್ರಗಳ ಅನುಸಾರ ಸರ್ಕಾರಕ್ಕೆ ಮಾಹಿತಿ ನೀಡಿ ಅನುಮೋದನೆಗೊಂಡ ನಂತರವೇ ವಿಲೀನೀಕರಣದ ಸೌಲಭ್ಯಗಳನ್ನು ವಿಸ್ತರಿಸಲಾಗುವುದು ಎಂದು ಹೇಳಿದರು. ಸರ್ಕಾರದದಿಂದ ಬಂದಿರುವ ಪತ್ರಗಳ ಪ್ರತಿಗಳನ್ನು ಸದಸ್ಯರಿಗೆ ನೀಡಲಾಯಿತು.

ಸದಸ್ಯರಾದ ಶ್ರೀ ಜಿ. ಧರ್ಮಪ್ರಸಾದ್‌ರವರು ಮಾತನಾಡಿ 2008ರಲ್ಲಿ ಸರ್ಕಾರದಿಂದ ಬಂದ ಪತ್ರದಲ್ಲಿ ವಿಲೀನೀಕರಣಗೊಂಡ ನೌಕರರ ಸೇವಾ ಸಕ್ರಮಾತಿಯನ್ನು ಸರಿ ಇದೆ ಎಂದು ಹೇಳಿರುವುದು ನಮ್ಮ ಪರವಾಗಿ ಇದೆ, ಆದ್ದರಿಂದ ಸರ್ಕಾರದೊಂದಿಗೆ ಪತ್ರ ವ್ಯವಹಾರ ನಡೆಸಿ ಅದಕ್ಕೆ ನಮ್ಮ ಅಭಯಂತರವಿಲ್ಲ, ಆದರೆ ಸೇವಾ ಸೌಲಭ್ಯ ವಿಸ್ತರಿಸಲು ಯಾವುದೇ ನಿರ್ಭಂದವಿಲ್ಲ ಸರ್ಕಾರಕ್ಕೆ ಕಳುಹಿಸಿಕೊಟ್ಟಲ್ಲಿ ಉತ್ತರ ಬರುವುದು ತಡವಾಗುತ್ತದೆ. ಆದುದರಿಂದ ಪ್ರಸ್ತುತ ವಿಲೀನೀಕರಣಗೊಂಡ ನೌಕರರುಗಳಿಗೆ ಸೌಲಭ್ಯಗಳನ್ನು ವಿಸ್ತರಣೆಯ

ಆದೇಶ ಹೊರಡಿಸಿ, ಸರ್ಕಾರದಿಂದ ಇದಕ್ಕೆ ವ್ಯತಿರಿಕ್ತವಾಗಿ ಬಂದಲ್ಲಿ ಸದರಿ ಸೌಲಭ್ಯ ವಿಸ್ತರಣೆ ಆದೇಶವನ್ನು ಹಿಂಪಡೆಯಬಹುದು ಎಂದು ಹೇಳಿದರು. ಇದು ಒಂದೂವರೆ ವರ್ಷದ ಸಿಂಡಿಕೇಟ್ ಸಭೆಯ ನಿರ್ಣಯ ಹಿಂದಿನ ಕುಲಸಚಿವರು ಉದ್ದೇಶಪೂರ್ವಕವಾಗಿ ವಿಳಂಭ ಮಾಡಿರುತ್ತಾರೆ ಎಂದು ಹೇಳಿದರು.

ಕುಲಸಚಿವರು ಮಾತನಾಡಿ ವಿಲೀನೀಕರಣವನ್ನು ಯಾವ ರೀತಿ ಮಾಡಿದ್ದೀರಿ ಎಂದು ಸರ್ಕಾರ ಮಾಹಿತಿಯನ್ನು ಕೇಳಿರುವಾಗ ಸರ್ಕಾರಕ್ಕೆ ಮಾಹಿತಿ ನೀಡದೇ ಅದೇ ನೌಕರರಿಗೆ ಹಿಂದಿನ ಸೇವೆಯನ್ನು ಪರಿಗಣಿಸಿ ಸೌಲಭ್ಯ ವಿಸ್ತರಣೆಯ ಆದೇಶ ನೀಡಲು ಸಾಧ್ಯವಿಲ್ಲ ಅವರ ವಿಲೀನೀಕರಣವು ಸಕ್ರಮ ಎಂದು ಸರ್ಕಾರದಿಂದ ಬಂದ ನಂತರ ಈ ಬಗ್ಗೆ ಪರಿಶೀಲಿಸಬಹುದು ಎಂದು ಹೇಳಿದರು.

ಸದಸ್ಯರಾದ ಶ್ರೀ ಜಿ. ಧರ್ಮಪ್ರಸಾದ್‌ರವರು ಮಾತನಾಡಿ ಕಣ್ಣ ಮುಂದೆ ಈ ಹಿಂದೆ 11 ಜನಕ್ಕೆ ಸೌಲಭ್ಯಗಳನ್ನು ನೀಡಿದ್ದಾರೆ ಈಗ ಇವರಿಗೆ ಬರಲ್ಲ ಎಂದರೆ ಅನ್ಯಾಯವಲ್ಲವೇ ಎಂದು ಹೇಳಿದರು. ಸರ್ಕಾರಕ್ಕೆ ಪತ್ರ ಬರೆಯಲು ನಮ್ಮ ಅಭ್ಯಂತರವಿಲ್ಲ. ಆದರೆ ಎಷ್ಟು ದಿನ ಅಂತ ಕಾಯುವುದು ಆರ್ಥಿಕ ಹೊರೆಯೇನೂ ಆಗುವುದಿಲ್ಲ ಎಂದು ಹೇಳಿದರು.

ಕುಲಸಚಿವರು ಮಾತನಾಡಿ ಆರ್ಥಿಕ ಹೊರೆ ಆಗುವುದಿಲ್ಲ ಎಂದು ಹೇಳಲು ಆಗುವುದಿಲ್ಲ ಸದರಿಯವರ ಗಳಿಕೆ ರಜೆ/ ನಿವೃತ್ತಿ ಉಪದಾನ ಹೆಚ್ಚಾಗುತ್ತದೆ, ವಿಲೀನೀಕರಣ ನೌಕರರ ಸೇವಾ ಸೌಲಭ್ಯಗಳನ್ನು ವಿಸ್ತರಿಸುವುದಕ್ಕೆ ಸಂಬಂಧಿಸಿದಂತೆ ಕೂಡ ಸರ್ಕಾರಕ್ಕೆ ಪತ್ರ ಬರೆದು ಸರ್ಕಾರದಿಂದ ಅನುಮೋದನೆ ಬಂದ ನಂತರ ಕ್ರಮ ಕೈಗೊಳ್ಳಲಾಗುವುದು ಎಂದರು.

ಸದಸ್ಯರಾದ ಶ್ರೀ ಜಿ. ಧರ್ಮಪ್ರಸಾದ್‌ರವರು ಮಾತನಾಡಿ ಸರ್ಕಾರವು ಕೋರಿರುವ ಮಾಹಿತಿಯನ್ನು ಸಿದ್ದಪಡಿಸಿ ಸರ್ಕಾರಕ್ಕೆ ಪತ್ರ ಬರೆದು ಸರ್ಕಾರದಿಂದ 15 ದಿನಗಳೊಳಗಾಗಿ ಉತ್ತರ ಬರದಿದ್ದಲ್ಲಿ ವಿಲೀನೀಕರಣ ನೌಕರರ ಸೇವಾ ಸೌಲಭ್ಯಗಳನ್ನು ವಿಸ್ತರಿಸಲು ಕ್ರಮ ಕೈಗೊಳ್ಳಿ ಎಂದು ಕೋರಿದರು.

ಕುಲಸಚಿವರು ಮಾತನಾಡಿ ಸರ್ಕಾರಕ್ಕೆ ವಿಶ್ವವಿದ್ಯಾಲಯವು ಸಮಯ ನಿಗದಿಗೊಳಿಸಲು ಸಾಧ್ಯವಿಲ್ಲ ಎಂದು ಹೇಳಿದರು. ಈ ಹಿಂದೆ ಸಿಬ್ಬಂಧಿಗಳ ಕೋರಿಕೆಯಂತೆ ಸಿಂಡಿಕೇಟ್ ಅನುಮೋದನೆಯನ್ವಯ ಸರ್ಕಾರದ ಅನುಮೋದನೆ ಪಡೆಯದೇ ಹುದ್ದೆಗಳ ಉನ್ನತೀಕರಣ ಮಾಡಿದ ಕುಲಪತಿಗಳು ಹಾಗೂ ಕುಲಸಚಿವರುಗಳ ವಿವರಗಳನ್ನು ಕೇಳಿರುತ್ತಾರೆ. ಸರ್ಕಾರದ ಅನುಮೋದನೆ ಪಡೆಯದೇ ಕ್ರಮ ಕೈಗೊಳ್ಳುವುದು ತಪ್ಪಾಗುತ್ತದೆ ಎಂದು ಹೇಳಿದರು.

ಆಗ ಜಂಟಿ ನಿರ್ದೇಶಕರಾದ ಶ್ರೀ ರಾಜಶೇಖರ್ ಹೆಬ್ಬಾರ್ ಸಿ. ರವರು ಮಾತನಾಡಿ ಎಲ್ಲಾ ಮಾಹಿತಿ ತಕ್ಷಣ ಕಳುಹಿಸಬೇಕಾಗಿತ್ತು ಈಗಲಾದರೂ ತಕ್ಷಣ ಸರ್ಕಾರಕ್ಕೆ ವರದಿ ಕಳುಹಿಸಿ ಈ ವಿಷಯದ ಕುರಿತು Follow up ಮಾಡಬೇಕು. ಈ ಬಗ್ಗೆ ಬೆಂಗಳೂರಿನಲ್ಲಿ ಎಲ್ಲಾ ಜಂಟಿ ನಿರ್ದೇಶಕರ ಸಭೆ ಕರೆಯಲಾಗಿತ್ತು ಆ ಸಭೆಗೆ ನಾನು ಕೂಡ ಹಾಜರಾಗಿದ್ದೆ. ಸರ್ಕಾರವು ಕುವೆಂಪು ವಿಶ್ವವಿದ್ಯಾಲಯದ ನಡೆಯ ಬಗ್ಗೆ, ಹೆಚ್ಚುವರಿ ವೇತನ ಪಾವತಿಯ ಬಗ್ಗೆ ಕೂಲಂಕುಷವಾಗಿ ಮಾಹಿತಿ ಪಡೆದಿದ್ದು ವಿಷಯ ಸೂಕ್ಷ್ಮವಾಗಿದೆ. ಇನ್ನು ಮುಂದೆ ಕುವೆಂಪು ವಿಶ್ವವಿದ್ಯಾಲಯದ ವಿಷಯ ಎಂದರೆ ಸರ್ಕಾರವು ಸೂಕ್ಷ್ಮವಾಗಿ ಪರಿಶೀಲಿಸುತ್ತದೆ ಎಂದು ಹೇಳಿದರು.

ಕುಲಸಚಿವರು ಹುದ್ದೆಗಳ ಉನ್ನತೀಕರಣದ ಕುರಿತು ಆಕ್ಷೇಪಿಸಿ ಸರ್ಕಾರದಿಂದ ದಿನಾಂಕ:12-09-2022ರಂದು ಬಂದ ಸರ್ಕಾರದ ಸುತ್ತೋಲೆಯನ್ನು ಸಭೆಯಲ್ಲಿ ಸಂಕ್ಷಿಪ್ತವಾಗಿ ಓದಿದರು. ಪ್ರತಿಗಳನ್ನು ಎಲ್ಲಾ ಸದಸ್ಯರಿಗೆ ನೀಡಲಾಯಿತು.

ಸದಸ್ಯರಾದ ಶ್ರೀ ಬಿ.ಸಿ. ಬಸವರಾಜ್ ರವರು ಮಾತನಾಡಿ ಇದು ಸರಳ ವಿಷಯ ಆಗಿದ್ದರೂ ಸರ್ಕಾರದ ಹಂತದಲ್ಲಿ ವಿಳಂಬವಾಗುತ್ತದೆ ಎಂದು ಹೇಳಿದರು.

ಸದಸ್ಯರಾದ ಶ್ರೀ ಜಿ. ಧರ್ಮಪ್ರಸಾದ್‌ರವರು ಮಾತನಾಡಿ ಸರ್ಕಾರಕ್ಕೆ ಕಳುಹಿಸಿ 15 ದಿನಗಳೊಳಗೆ ಏನೂ ಉತ್ತರ ಬರದಿದ್ದಲ್ಲಿ ಏನು ಮಾಡುವುದು ಎಂದರು.

ಜಂಟಿ ನಿರ್ದೇಶಕರು ಮಾತನಾಡಿ ನೆನಪೋಲೆ ಬರೆಯಬೇಕು ಎಂದು ಹೇಳಿದರು.

ನಿರ್ಣಯ: ವಿಲಿನೀಕರಣಗೊಂಡ ನೌಕರರುಗಳ ನೇಮಕಾತಿಯನ್ನು ರದ್ದುಗೊಳಿಸಿ ಈ ಹಿಂದೆ ಸರ್ಕಾರದಿಂದ ಹೊರಡಿಸಲಾಗಿರುವ ಆದೇಶವನ್ನು ಹಿಂಪಡೆಯುವಂತೆ ಸರ್ಕಾರಕ್ಕೆ ವಿಶ್ವವಿದ್ಯಾಲಯದಿಂದ ಸಲ್ಲಿಸಲಾಗಿರುವ ಪತ್ರಕ್ಕೆ ಸಂಬಂಧಿಸಿದಂತೆ ಸರ್ಕಾರವು ಮಾಹಿತಿ ಕೋರಿರುವುದರಿಂದ ಸರ್ಕಾರವು ಕೋರಿರುವ ಮಾಹಿತಿಗಳನ್ನು ಪೂರಕ ದಾಖಲಾತಿಗಳೊಂದಿಗೆ ಕೂಡಲೇ ಸರ್ಕಾರಕ್ಕೆ ಸಲ್ಲಿಸಲು ನಿರ್ಣಯಿಸಲಾಯಿತು. ಈ ವಿಷಯವು ತುಂಬಾ ತುರ್ತಾಗಿರುವುದರಿಂದ ಸರ್ಕಾರದಿಂದ 15 ದಿನಗಳಲ್ಲಿ ಉತ್ತರ ಬರದಿದ್ದಲ್ಲಿ ಪುನ: ವಿಶೇಷ ಸಿಂಡಿಕೇಟ್ ಸಭೆ ಕರೆದು ಈ ಪ್ರಸ್ತಾವವನ್ನು ಚರ್ಚಿಸಲಾಗುವುದು ಎಂದು ಸರ್ಕಾರಕ್ಕೆ ಬರೆಯುವ ಪತ್ರದಲ್ಲಿ ನಮೂದಿಸಲು ನಿರ್ಣಯಿಸಲಾಯಿತು.

2) ಸದಸ್ಯರಾದ ಶ್ರೀ ಜಿ. ಧರ್ಮಪ್ರಸಾದ್‌ರವರು ಮಾತನಾಡಿ ಇತ್ತೀಚೆಗೆ ಅನುಕಂಪದ ನೇಮಕಾತಿ ಕೋರಿ ವಿಕ್ರಮ್ ಸನ್ ಆಫ್ ದಿವಂಗತ ಪಾಲಾಕ್ಷಪ್ಪರವರು ಮನವಿ ಸಲ್ಲಿಸಿರುತ್ತಾರೆ, ಅನುಕಂಪದ ಆಧಾರದ ಮೇಲೆ ಸದರಿಯವರ ನೇಮಕಾತಿಯನ್ನು ತಕ್ಷಣ ಮಾಡಬೇಕೆಂದು ಕೋರಿದರು.

ಜಂಟಿ ನಿರ್ದೇಶಕರಾದ ಶ್ರೀ ರಾಜಶೇಖರ್ ಹೆಬ್ಬಾರ್ ಸಿ. ರವರು ಆರು ತಿಂಗಳೊಳಗೆ ಅನುಕಂಪದ ನೇಮಕಾತಿ ಮಾಡಬೇಕು ಎಂದು ಹೇಳಿದರು.

ನಿರ್ಣಯ: ಕುಲಸಚಿವರು ನಿಯಮಾನುಸಾರ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

3) ಸದಸ್ಯರಾದ ಶ್ರೀ ಜಿ. ಧರ್ಮಪ್ರಸಾದ್‌ರವರು ಮಾತನಾಡಿ ವಿಶ್ವವಿದ್ಯಾಲಯದ ನೌಕರರಾದ ಶ್ರೀ ರುದ್ರೇಶ್ ಬಿ.ಎಸ್. ಇವರು ತಮಗೆ ಕೌಟುಂಬಿಕ ಸಮಸ್ಯೆ ಇರುವುದರಿಂದ ತಮ್ಮನ್ನು ತುಮಕೂರು ವಿಶ್ವವಿದ್ಯಾಲಯಕ್ಕೆ ನಿಯೋಜನೆ ಮಾಡಲು ಕೋರಿರುತ್ತಾರೆ ಎಂದು ತಿಳಿಸಿ ಈ ಕುರಿತು ಪರಿಶೀಲಿಸಲು ಕೋರಿದರು.

ನಿರ್ಣಯ: ಕುಲಸಚಿವರು ನಿಯಮಾನುಸಾರ ಪರಿಶೀಲಿಸುವುದಾಗಿ ತಿಳಿಸಿದರು.

**2022–ಸಿಂ–8.34: ಸರ್ಕಾರದಿಂದ ಬಂದ ಪತ್ರಗಳು/ ರಹಸ್ಯ ವರದಿಗಳ ಮಂಡನೆ**

**2022–ಸಿಂ–8.35: ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು**

**1) ದೂರ ಶಿಕ್ಷಣ ನಿರ್ದೇಶನಾಲಯದ 2019–20ನೇ ಸಾಲಿನ ಪ್ರವೇಶ ಪಡೆದ ವಿದ್ಯಾರ್ಥಿಗಳು ಹಾಗು ಆಂತರಿಕ ಅಂಕಗಳ ಪರಿಶೀಲನೆ ಸಮಿತಿ ವರದಿ ಕುರಿತು.**

ಕುಲಸಚಿವರು ದೂರ ಶಿಕ್ಷಣ ನಿರ್ದೇಶನಾಲಯದ 2019–20ನೇ ಸಾಲಿನಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳು ಹಾಗು ಆಂತರಿಕ ಅಂಕಗಳ ಪರಿಶೀಲನೆಗಾಗಿ ರಚಿಸಿದ ಸಮಿತಿಯು ನೀಡಿದ ವರದಿಯನ್ನು ಸಭೆಗೆ ಮಂಡಿಸಿದರು.

ಕುಲಸಚಿವರು(ಪರೀಕ್ಷಾಂಗ)ರವರು ಸದರಿ ಸಮಿತಿಯ ಸಂಚಾಲಕರಾಗಿದ್ದು ವರದಿಯನ್ನು ಸಂಕ್ಷಿಪ್ತವಾಗಿ ಸಭೆಯಲ್ಲಿ ಓದಿದರು. ಸದರಿ ವರದಿಯಲ್ಲಿ ಸೂಚಿಸಿರುವ ಅಂಶಗಳ ಕುರಿತು ಕಾನೂನು ಅಭಿಪ್ರಾಯ ಪಡೆದು ಮುಂದುವರೆಯಲು ಸೂಚಿಸಲಾಗಿದೆ ಎಂದರು.

ಸದಸ್ಯರಾದ ಶ್ರೀ ಜಿ. ಧರ್ಮಪ್ರಸಾದ್‌ರವರು ಮಾತನಾಡಿ ಸುಮಾರು 14100 ಜನ ದೂರ ಶಿಕ್ಷಣದ ವಿದ್ಯಾರ್ಥಿಗಳಿದ್ದಾರೆ ಅವರಿಗೆ ಪರೀಕ್ಷೆಯ ಫಲಿತಾಂಶ ನೀಡಬೇಕು ಎಂದು ಹೇಳಿದರು.

ಸದಸ್ಯರಾದ ಶ್ರೀ ಹೆಚ್. ರಾಮಲಿಂಗಪ್ಪರವರು ಮಾತನಾಡಿ ಮೂರು ಅಧ್ಯಯನ ಕೇಂದ್ರದವರು ಪತ್ರ ನೀಡಿ 2019–20ನೇ ಸಾಲಿನ ಪ್ರಥಮ ಆವೃತ್ತಿಯ ಎಲ್ಲಾ ವಿದ್ಯಾರ್ಥಿಗಳು ಪಾವತಿಸಿರುವ ಶುಲ್ಕವನ್ನು ವಿಶ್ವವಿದ್ಯಾಲಯಕ್ಕೆ ಪಾವತಿಸಲಾಗಿರುತ್ತದೆ ಆಂತರಿಕ ಅಂಕಗಳ ಸಾರಲೇಖ ಪುಸ್ತಕಗಳನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಲಾಗಿದ್ದರೂ ಇದುವರೆಗೂ ನಮ್ಮ ಕಾಲೇಜಿನ ಫಲಿತಾಂಶ ಪ್ರಕಟಿಸಿಲ್ಲ ಆದರೆ ನಮ್ಮ ಕಾಲೇಜಿಗೆ ಟ್ಯಾಗ್ ಮಾಡಲಾದ ಕಾಲೇಜಿನ ಫಲಿತಾಂಶ ಪ್ರಕಟವಾಗಿದೆ ನಮ್ಮ ಕಾಲೇಜಿನ ಫಲಿತಾಂಶ ಏಕೆ ಪ್ರಕಟವಾಗಿಲ್ಲ ಎಂಬ ಬಗ್ಗೆ ಮಾಹಿತಿ ಇಲ್ಲ ಎಂದು ತಿಳಿಸಿದ್ದಾರೆ ಎಂದರು.

ಕುಲಸಚಿವ(ಪರೀಕ್ಷಾಂಗ)ರವರು ಮಾತನಾಡಿ ಸದರಿ ಅಧ್ಯಯನ ಕೇಂದ್ರದವರು ಸಾರ ಲೇಖಗಳನ್ನು ವಿಶ್ವವಿದ್ಯಾಲಯಕ್ಕೆ ನೀಡಿರುವುದಾಗಿ ತಿಳಿಸುತ್ತಾರೆ ಆದರೆ ತಲುಪಿಸಿರುವ ಬಗ್ಗೆ ಅವರ ಬಳಿ ಸ್ವೀಕೃತಿ ಪತ್ರ ಇಲ್ಲ ಎಂದು ಹೇಳಿದರು.

ಸದಸ್ಯರಾದ ಶ್ರೀ ಬಿ.ಸಿ. ಬಸವರಾಜಪ್ಪರವರು ಮಾತನಾಡಿ ಅಧ್ಯಯನ ಕೇಂದ್ರದವರು ಸ್ವೀಕೃತಿ ಪಡೆದುಕೊಳ್ಳಬೇಕಿತ್ತು ಅವರದ್ದೇ ತಪ್ಪು ಎಂದು ಹೇಳಿದರು.

ಜಂಟಿ ನಿರ್ದೇಶಕರಾದ ಶ್ರೀ ರಾಜಶೇಖರ್ ಹೆಬ್ಬಾರ್ ಸಿ. ರವರು ಮಾತನಾಡಿ ಯಾರಿಗೂ ಅನ್ಯಾಯ ಆಗದಂತೆ ನಿರ್ಣಯ ತೆಗೆದುಕೊಳ್ಳಿ, ಅಪಲೋಡ್ ಆಗಿದ್ದರೆ ಅವರಿಗೆ ಅವಕಾಶ ಕೊಡಿ ಎಂದು ಹೇಳಿದರು.

ನಿರ್ಣಯ: ದೂರ ಶಿಕ್ಷಣ ನಿರ್ದೇಶನಾಲಯದ 2019–20ನೇ ಸಾಲಿನ ವಿದ್ಯಾರ್ಥಿಗಳ ಪ್ರವೇಶಾನುಮೋದನೆ ಮತ್ತು ಆಂತರಿಕ ಅಂಕ(I.A)ಗಳನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಲಾಗಿದೆ ಎನ್ನಲಾದ ಕುರಿತು ಪರಿಶೀಲನೆಗೆ ರಚಿಸಿದ ಸಮಿತಿಯು ಸಲ್ಲಿಸಿದ ವರದಿಯ ಕುರಿತು ಕಾನೂನು ಸಲಹೆ ಪಡೆದು ಮುಂದಿನ ಕ್ರಮಕೈಗೊಳ್ಳಲು ಸಿಂಡಿಕೇಟ್ ಸಭೆಯು ಸೂಚಿಸಿತು.

ಅಂತಿಮವಾಗಿ ಸಭೆಗೆ ಆಗಮಿಸಿ ಸೂಕ್ತ ಸಲಹೆ, ಸಹಕಾರ ನೀಡಿದ ಎಲ್ಲಾ ಸದಸ್ಯರುಗಳಿಗೆ ಕುಲಸಚಿವರು ಹೃತ್ಪೂರ್ವಕವಾಗಿ ವಂದಿಸಿದ ನಂತರ ಸಭೆಯ ಕಲಾಪಗಳು ಮುಕ್ತಾಯವಾದವು.

ಕುಲಸಚಿವರು
**ಕುಲಸಚಿವರು**
**ಕುವೆಂಪು ವಿಶ್ವವಿದ್ಯಾನಿಲಯ**
**ಜ್ಞಾನಸಹ್ಯಾದ್ರಿ**
**ಶಂಕರಘಟ್ಟ-577 451**
**ಶಿವಮೊಗ್ಗ ಜಿಲ್ಲೆ.**

ಸಹಿ/–
ಕುಲಪತಿಗಳು